ಈ ದಿನ ಇಲ್ಲಿಗೆ ಬಂದು ಈ ನಗರದಲ್ಲಿ ಸ್ಥಾಪಿತವಾಗಿ ನಡೆಯುತ್ತಿರುವ ಹಲವು ಉದ್ಯಮಗಳನ್ನು ನೋಡಲು ಅವಕಾಶವನ್ನು ದೊರಕಿಸಿಕೊಟ್ಟುದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ಕೆಲವು ಕಾಲದ ಹಿಂದೆ ಈ ಪ್ರದೇಶವು ದುಷ್ಟ ಮೃಗಗಳಿಂದ ಕೂಡಿದ ಅರಣ್ಯಪ್ರದೇಶವಾಗಿತ್ತೆಂದು ನಾನು ಕೇಳುತ್ತೇನೆ. ಅಂತಹ ಪ್ರದೇಶವು ಇಷ್ಟು ಜನಭರಿತವಾಗಿ ಇಲ್ಲಿ ಉತ್ಸಾಹದಿಂದ ಕೈಗಾರಿಕೆಗಳು ನಡೆಯುತ್ತಿರುವುದನ್ನೂ ದೊಡ್ಡವರು ಸಣ್ಣವರು ಎನ್ನದೆ ಎಲ್ಲರ ಯೋಗಕ್ಷೇಮಕ್ಕೂ ತಕ್ಕಷ್ಟು ಗಮನವನ್ನು ಕೊಡುತ್ತಿರುವುದನ್ನೂ ನೋಡಿ ನನಗೆ ಬಹಳ ಸಂತೋಷವಾಗಿದೆ. ಸರ್ಕಾರೀ ಅಧಿಕಾರಿಗಳು ಪ್ರಜೆಗಳ ಹಿತವನ್ನು ಇಷ್ಟು ಉತ್ತಮ ರೀತಿಯಲ್ಲಿ ಸಾಧಿಸುತ್ತಿರುವುದನ್ನು ನೋಡಿ ನನಗೆ ಬಹಳ ಹರ್ಷವುಂಟಾಗಿದೆ. ಇಲ್ಲಿ ಸ್ಥಾಪಿತವಾಗಿರುವ ಹಲವು ಉದ್ಯಮಗಳೂ ಬೆಳೆದು, ಆ ಉದ್ಯಮಗಳನ್ನು ನಡೆಯಿಸುತ್ತಿರುವ ಮಹಾಜನರಿಗೆ ಇತೋಪ್ಯತಿಶಯವಾಗಿ ಸುಖಸಂತೋಷಗಳುಂಟಾಗಲೆಂದು ಹಾರೈಸುತ್ತೇನೆ."



ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಒಂದು ದೃಶ್ಯ.

ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಪ್ರಗತಿ.

ಪ್ರತಿ ಮೂರುವರೆ ಚದರಮೈಲಿಗಳಿಗೂ ಒಂದು ಶಾಲೆ.

"ಸಂಸ್ಥಾನದಲ್ಲಿ ಸರಾಸರಿ ಪ್ರತಿ 3.59 ಮೈಲಿಗಳು ಒಂದರಂತೆಯೂ, ಪ್ರತಿ 787 ಪ್ರಜೆಗಳಿಗೆ ಒಂದರಂತೆಯೂ ಶಾಲೆಗಳಿವೆ. ಪ್ರಜಾ ಸಂಖ್ಯೆಯಲ್ಲಿ ಶಾಲೆಗೆ ಹೋಗುವ ಯಾವ ವಯಸ್ಸಿನ ಮಕ್ಕಳ ಪೈಕಿ ಪ್ರತಿ 2.60 ಮಂದಿಯಲ್ಲಿ ಒಬ್ಬನು ಶಾಲೆಗೆ ಹೋಗುತ್ತಿದಾನೆ."

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಮಾಡುತ್ತಿರುವ ಹಣವೇ ವಿದ್ಯಾಭ್ಯಾಸದ ಪ್ರಗತಿಯನ್ನು ಸೂಚಿಸುತ್ತದೆ. ಪ್ರತಿ ವರ್ಷವೂ ಸರ್ಕಾರದವರೂ, ಸ್ಥಳೀಯ ಸಂಸ್ಥೆಗಳೂ ಮತ್ತು ಇತರ ಸಂಸ್ಥೆಗಳೂ ಒಟ್ಟು 69½ ಲಕ್ಷ ರೂಪಾಯಿಗಳನ್ನು ವಿನಿಯೋಗಿಸುತ್ತಿದಾರೆ. ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಪ್ರತಿ ವರ್ಷವೂ 54 ಲಕ್ಷ ರೂಪಾಯಿಗಳನ್ನು ಮೀಸಲು ಮಾಡುತ್ತಿದಾರೆ.

ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆಯು ಶಾಲೆಗೆ ಹೋಗಬಹುದಾದ ಮಕ್ಕಳ ಸಂಖ್ಯೆಯ ಸೇಕಡ 57·14ರಷ್ಟಿದೆ. ಸಂಸ್ಥಾನದ ಪ್ರಜಾ ಸಂಖ್ಯೆಯ 15ರಷ್ಟು ಮಂದಿ ಶಾಲೆಗೆ ಹೋಗುವ ಮಕ್ಕಳಾಗಿರುತ್ತಾರೆ.

ನಿಮ್ನ ಪಂಗಡಗಳವರಿಗೆ ರಿಯಾಯಿತಿ.

ಹೈ ಸ್ಕೂಲು ತರಗತಿಗಳವರಿಗೂ ವಿದ್ಯಾಭ್ಯಾಸವು ಉಚಿತವಾಗಿದೆ. ಹೈ ಸ್ಕೂಲಿನ ಮೂರು ತರಗತಿಗಳಲ್ಲಿ ತಿಂಗಳಿಗೆ 3, 3½ ಮತ್ತು 4 ರೂಪಾಯಿಗಳಂತೆ ಫೀಜನ್ನು ವಿಧಿಸುತ್ತಿದೆ. ವಿದ್ಯಾರ್ಥಿನಿಯರಿಗೂ, ಮುಸಲ್ಮಾನ್ ಮತ್ತು ರಾಜಪುತ್ರರೇ ಮೊದಲಾದ ಇತರ ಪಂಗಡದ ವಿದ್ಯಾರ್ಥಿಗಳಿಗೂ ಅರ್ಧ ಫೀಜನ್ನು ಮಾತ್ರ ಮಸೂಲು ಮಾಡಲಾಗುತ್ತಿದೆ. ನಿಮ್ನ ಪಂಗಡಗಳವರಿಗೆ ವಿದ್ಯಾಭ್ಯಾಸದ ಶುಲ್ಕವೇ ಇಲ್ಲ.

1940ನೇ ಇಸವಿ ಮಾರ್ಚ್ 1ನೇ ತಾರೀಖಿನ ದಿನ ಸಂಸ್ಥಾನದಲ್ಲಿ ನಾನಾ ದರ್ಜೆಯ 8,182 ಶಾಲೆಗಳಿದ್ದುವು. ಇವುಗಳಲ್ಲಿ 3,69,472 ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು.

ಸೆಕಂಡರಿ ಶಾಲೆಗಳ ಪೈಕಿ ಸೇಕಡ 80ರಷ್ಟು ಶಾಲೆಗಳೂ ಸರ್ಕಾರಕ್ಕೆ ಸೇರಿದುವುಗಳಾಗಿವೆ. ಉಳಿದುವು ಸ್ವತಂತ್ರ ಅಥವಾ ಸರ್ಕಾರದವರಿಂದ ಪೋಷಿತವಾದ ಸಂಸ್ಥೆಗಳಾಗಿವೆ. 1931ನೇ ಇಸವಿಯವರೆಗೂ, ವಿದ್ಯಾಭ್ಯಾಸದ ಇಲಾಖೆಯವರೇ ಪ್ರಾಥಮಿಕ ವಿದ್ಯಾಭ್ಯಾಸದ ಆಡಳಿತವನ್ನು ವಹಿಸಿದ್ದರು. ಆ ವರ್ಷ 1930ನೇ ಇಸವಿಯಲ್ಲಿ ಸಾದರಾದ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನಿನ ಮೇರೆಗೆ ಪ್ರಾಥಮಿಕ ವಿದ್ಯಾಭ್ಯಾಸದ ಆಡಳಿತವನ್ನು ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸಲಾಯಿತು. ಪ್ರಾಥಮಿಕ ವಿದ್ಯಾಭ್ಯಾಸದ ಖರ್ಚಿನಲ್ಲಿ ಸೇಕಡ 80ರಷ್ಟು ವೆಚ್ಚವನ್ನು ಸರ್ಕಾರದವರೇ ಪಾವತಿಸುತ್ತಿದಾರೆ.

ಪ್ರಗತಿ.

1857ನೇ ಇಸವಿಯಲ್ಲಿ ಪ್ರಸಿದ್ಧವಾದ ಹಾಲಿಫಾಕ್ಸ್‌ರ ಡಿಸ್ಪ್ಯಾಚನ ಪ್ರಕಟನೆಯಾದೊಡನೆಯೇ ಮೈಸೂರಿನಲ್ಲಿ ವಿದ್ಯಾಭ್ಯಾಸದ ಇಲಾಖೆಯು ಸ್ಥಾಪಿತವಾಯಿತು. ಇಂದು ಸಂಸ್ಥಾನವು ವಿದ್ಯಾಭ್ಯಾಸದ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದ ಯಾವ ಪ್ರಾಂತದೊಡನೆಯಾದರೂ ಸರಿತೂಗಬಲ್ಲುದಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದಿಂದ ಕೊಲಿಜಿಯೇಟು ವಿದ್ಯಾಭ್ಯಾಸದವರೆಗೂ ಎಲ್ಲ ಸಂಸ್ಥೆಗಳ ಆಡಳಿತವೂ ವಿದ್ಯಾಭ್ಯಾಸದ ಇಲಾಖೆಯವರ ಹತೋಟಿಯಲ್ಲಿದೆ. ಕಾರೇಜುಗಳು, ಮೆಡಿಕಲ್ ಮತ್ತು ಇಂಜಿನಿಯರಿಂಗು ಶಾಲೆ ಇವು ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟಿವೆ. ವ್ಯವಸಾಯ ಶಿಕ್ಷಣ ಶಾಲೆಗಳು ವ್ಯವಸಾಯ ಇಲಾಖೆಯ ಡೈರೆಕ್ಟರವರ ಆಡಳಿತದಲ್ಲಿಯೂ, ವೃತ್ತಿ ಶಿಕ್ಷಣಾಲಯಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರ ಆಡಳಿತದಲ್ಲಿಯೂ ಇವೆ.

1939–40ನೆಯ ಸಾಲಿನಲ್ಲಿ ಸಂಸ್ಥಾನದ ವ್ಯಾಪಾರ.

ವ್ಯಾಪಾರವು ಹೆಚ್ಚಿದೆ.

ಸಂಸ್ಥಾನದಲ್ಲಿ 1938–39ನೆಯ ಸಾಲಿನಲ್ಲಿ ರೈಲಿನ ಮೂಲಕ 1,24,70,895 ರೈ. ಮಣಗಳಷ್ಟು ವ್ಯಾಪಾರ ಸಾಮಗ್ರಿಗಳನ್ನು (ಬೆಲೆ 20,75,56,152 ರೂಪಾಯಿಗಳು) ಸಾಗಿಸಿದುದಕ್ಕೆ 1939–40ನೆಯ ಸಾಲಿನಲ್ಲಿ 2,26,88,179 ರೈ. ಮಣಗಳಷ್ಟು ವ್ಯಾಪಾರ ಸಾಮಗ್ರಿಗಳನ್ನು (ಬೆಲೆ 21,73,86,122 ರೂ.) ಸಾಗಿಸಲಾಯಿತು. ರೈಲು ಮೂಲಕ 72,13,109 ರೈ. ಮಣಗಳಷ್ಟು (ಬೆಲೆ 8,38,03,804 ರೂಪಾಯಿಗಳು) ಸಾಮಾನುಗಳು ರಫ್ತಾದುದಕ್ಕೆ, ಪ್ರಸಕ್ತ ವರ್ಷ 77,21,688 ರೈ. ಮಣಗಳಷ್ಟು ಅಂದರೆ (ಬೆಲೆ 9,02,14,637 ರೂಪಾಯಿಗಳು) ಸಾಮಾನುಗಳನ್ನು ರಫ್ತು ಮಾಡಲಾಯಿತು.

ಆಮದು.

1938–39ರಲ್ಲಿ 5·23ಲಕ್ಷ ಪಲ್ಲ ಅಕ್ಕಿಯು ಆಮದಾದುದಕ್ಕೆ ಪ್ರಸಕ್ತ ವರ್ಷ 4·54 ಲಕ್ಷ ಪಲ್ಲ ಅಕ್ಕಿಯು ಆಮದಾಯಿತು. ಆದರೆ ಗೋಧಿ, ಗೋಧಿಹಿಟ್ಟು ಮೊದಲಾದುವುಗಳ ಆಮದು 4,47,718 ರೈ. ಮಣಗಳಿಂದ 4,89,660 ರೈ. ಮಣಗಳಿಗೇರಿತು. ಕಚ್ಚಾ ಮಾಲುಗಳ ಆಮದು 58,29,001 ರೈ. ಮಣಗಳಿಂದ 64,62,024 ರೈ. ಮಣಗಳಿಗೇರಿತು. ಪೆಟ್ರೋಲಿನ ಆಮದು 27,52,375 ಗ್ಯಾಲನುಗಳೂ, ಸೀಮೆ ಎಣ್ಣೆಯ ಆಮದು 43,97,486 ಗ್ಯಾಲನುಗಳೂ ಆಗಿದ್ದಿತು.

ಕಳೆದ ವರ್ಷ 26,12,993 ಗ್ಯಾಲನು ಪೆಟ್ರೋಲನ್ನೂ 38,19,090 ಗ್ಯಾಲನು ಸಿಮೇಎಣ್ಣೆಯನ್ನು ಆಮದು ಮಾಡಿದ್ದಿತು. ಕಚ್ಚಾ ಹತ್ತಿಯ ಆಮದು 2,47,653 ಮಣದಿಂದ 2,51,104 ಮಣಗಳಿಗೇರಿತು. ಅಂದರೆ, ಸೇಕಡ 1·4 ರಷ್ಟು ಹೆಚ್ಚಾದಹಾಗಾಯಿತು. 38,17,062 ರೈ. ಮಣಗಳಷ್ಟು ತಯಾರಾದ ವಸ್ತುಗಳ ಆಮದು ಮಾಡಲಾಯಿತು. ಇದರ ಬೆಲೆ 7,75,07,947 ರೂಪಾಯಿಗಳು 118·54 ಲಕ್ಷ ರೂಪಾಯಿಗಳ ಯಂತ್ರಗಳನ್ನು ಆಮದು ಮಾಡಲಾಯಿತು. ಕಳೆದ ವರ್ಷ 87 ಲಕ್ಷ ರೂಪಾಯಿಗಳ ಬೆಲೆಬಾಳುವ ಯಂತ್ರಗಳನ್ನುಆಮದುಮಾಡಿದ್ದಿತು.

ರಫ್ತು.

ಪ್ರಸಕ್ತ ವರ್ಷದಲ್ಲಿ ಒತ್ತ, ರಾಗಿ, ಬೆಲ್ಲ, ಮೆಣಸಿನಕಾಯಿ, ಕೊತ್ತಂಬರಿ ಮತ್ತು ಹೊಗೇಸೊಪ್ಪನ್ನು ಹಿಂದಿನ ವರ್ಷಕ್ಕಿಂತ ಹೆಚ್ಚಾಗಿ ರಫ್ತುಮಾಡಲಾಯಿತು. ಜವರೆ, ಬಜ್ರಾ, ಕಾಫಿ, ನೆಲಗಡಲೆ ಬೀಜ, ತೆಂಗು, ಅಡಿಕೆ, ಏಲಕ್ಕಿ ಮತ್ತು ಸಕ್ಕರೆ ಇವುಗಳ ರಫ್ತು ಸ್ವಲ್ಪ ಕಡಿಮೆಯಾಗಿದ್ದಿತು. 1,32,901 ರೈ. ಮಣಗಳಷ್ಟು ಅಡಿಕೆಯನ್ನೂ, 6,892 ರೈ. ಮಣಗಳಷ್ಟು ಏಲಕ್ಕಿಯನ್ನೂ ರಫ್ತುಮಾಡಲಾಯಿತು. ಹಿಂದಿನ ವರ್ಷ 1,39,731 ಮಣ ಅಡಿಕೆಯನ್ನೂ, 9,704 ಮಣ ಏಲಕ್ಕಿಯನ್ನೂ ರಫ್ತು ಮಾಡಿದ್ದಿತು. ರಿಫೈನಡ್ ಸಕ್ಕರೆಯ ರಫ್ತು 5,65,898 ರೈ. ಮಣಗಳಿಂದ (ಬೆಲೆ 56,94,349 ರೂಪಾಯಿಗಳು) ಪ್ರಸಕ್ತ ವರ್ಷದಲ್ಲಿ 4,20,614 ರೈಲ್ವೆ ಮಣಗಳಿಗೆ (ಬೆಲೆ 54,50,780 ರೂಪಾಯಿಗಳು) ಇಳಿಯಿತು. ಬೆಲ್ಲದ ರಫ್ತು 93,975 ರೈಲ್ವೆ ಮಣಗಳಿಂದ ಪ್ರಸಕ್ತವರ್ಷದಲ್ಲಿ 1,64,489ಮಣಗಳಿಗೇರಿತು. ಅಂದರೆ, ಸೇಕಡ 75·3ರಷ್ಟು ಹೆಚ್ಚಾದಹಾಗಾಯಿತು. ನೆಲಗಡಲೆಯ ಎಣ್ಣೆಯ ರಫ್ತು 63,139 ಮಣಗಳಿಂದ 53,371ಕ್ಕೆ ಇಳಿಯಿತು. ಆದರೆ ಎಣ್ಣೆಯ ಬೆಲೆಯು ಸ್ವಲ್ಪ ಹೆಚ್ಚಾಗಿದ್ದಿತು. ಕೊಬ್ಬರಿಯ ರಫ್ತು 3,61,142 ಮಣಗಳಿಂದ (ಬೆಲೆ 40,52,161ರೂಪಾಯಿಗಳು) 2,83,652 ಮಣಗಳಿಗೆ (ಬೆಲೆ 42,91,782 ರೂಪಾಯಿಗಳು) ಇಳಿಯಿತು.

ಮೈಸೂರು ರೇಷ್ಮೆ.

ಪ್ರಸಕ್ತ ವರ್ಷ 6,986 ಮಣ ಮೈಸೂರು ರೇಷ್ಮೆಯನ್ನು ರಫ್ತು ಮಾಡಲಾಯಿತು. ಇದರ ಬೆಲೆ 24,64,754 ರೂಪಾಯಿಗಳು. ಹಿಂದಿನ ವರ್ಷ 5,384 ರೈ. ಮಣಗಳಷ್ಟು (ಬೆಲೆ 17,35,948 ರೂಪಾಯಿಗಳು) ರೇಷ್ಮೆಯನ್ನು ರಫ್ತು ಮಾಡಿದ್ದಿತು.

ಪ್ರಸಕ್ತ ವರ್ಷದಲ್ಲಿ ರಸ್ತೆಗಳ ಮೂಲಕ 41.56,240 ರೈ. ಮಣಗಳಷ್ಟು ಅಂದರೆ, 3,48,62,957 ರೂಪಾಯಿಗಳ ಬೆಲೆ ಬಾಳುವಷ್ಟು ಸಾಮಾನುಗಳನ್ನು ಸಾಗಿಸಲಾಯಿತು. ಇದರಲ್ಲಿ 18,67,448 ಮಣಗಳಷ್ಟು ಸಾಮಾನುಗಳು (ಬೆಲೆ 1,45,89,004 ರೂ. ಗಳು) ಆಮದಾಗಿಯೂ, 22,88,792 ಮಣಗಳು (ಬೆಲೆ 2,02,13,953 ರೂಪಾಯಿಗಳು ರಫ್ತಾಗಿಯೂ ಇದ್ದಿತು.)

ಸಂಸ್ಥಾನದಲ್ಲಿ ಜಾನುವಾರುಗಳ ರಕ್ಷಣೆ.

1939–40ನೇ ಇಸವಿಯಲ್ಲಿ ಮೈಸೂರು ಸೀರಂ ಇನ್‌ಸ್ಟಿಟ್ಯೂಟಿನ ಪರಿಶೋಧನಾ ಶಾಖೆಯಲ್ಲಿ ಬಹಳ ಹೆಚ್ಚಿನ ಕೆಲಸ ಕಾರ್ಯಗಳು ನಡೆದಿವೆ. ನಾಯಿಗಳಿಗೆ ಬರುವ ರ್ಯಾಬಿನ್ ರೋಗ, ಕುರಿಗಳು, ಆಡುಗಳು ಮತ್ತು ಇತರ ಜಾನುವಾರುಗಳಿಗೆ ಬರುವ ನರಡಿರೋಗ, ಇವುಗಳನ್ನು ನಿವಾರಣೆಮಾಡಲು ಉತ್ತಮವಾದ ವ್ಯಾಕ್ಸಿನನ್ನು ಕಂಡುಹಿಡಿಯಲಾಗಿವೆ.

ಜಾನುವಾರುಗಳ ತಳಿಗಳನ್ನು ಉತ್ತಮಪಡಿಸುತ್ತಿರುವುದೂ ಅಲ್ಲದೆ, ಮೈಸೂರಿನ ವೈಜ್ಞಾನಿಕರು ಜಾನುವಾರುಗಳಿಗೆ ಬರುವ ಹಲವು ರೋಗಗಳನ್ನು ನಿವಾರಿಸಲು ತಕ್ಕ ಔಷಧಿಗಳನ್ನು ಕಂಡುಹಿಡಿಯಲೂ ಸಹ ನಿರಂತರವೂ ಶ್ರಮಿಸುತ್ತಿದ್ದಾರೆ.

ಜಾನುವಾರುಗಳಿಗೆ ಬರುವ ಜೋನ್ಸ್ ರೋಗದ ನಿವಾರಣೋಪಾಯವನ್ನು ಕಂಡುಹಿಡಿಯಲು ಇಂಪೀರಿಯರ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚಿನವರ ಸಹಾಯ ಮಾಡುತ್ತಿದ್ದಾರಷ್ಟೆ. ಈ ಸಹಾಯವನ್ನು ಆಗಸ್ಟು 1ನೇ ತಾರೀಖಿನಿಂದ ಇನ್ನೂ ಬರುವ ವರ್ಷದ ಕಾಲದವರೆಗೂ ಹೆಚ್ಚಿಸಿದೆ. ಇದಕ್ಕೆ ಬೇಕಾಗುವ 5,000 ರೂಪಾಯಿಗಳ ವೆಚ್ಚದಲ್ಲಿ ಅರ್ಧವನ್ನು ಸರ್ಕಾರದವರೂ ಇನ್ನು ಅರ್ಧವನ್ನು ಕೌನ್ಸಿಲಿನವರೂ ವಹಿಸಿಕೊಳ್ಳುತ್ತಾರೆ. ಸ್ಥಳದ ಮತ್ತು ಸೀಮೆಯ ಜಾನುವಾರುಗಳ ತಳಿಗಳ ಎಥಿನೂಲೊರಾಜಿಕಲ್ ಸರ್ವೆಯನ್ನು ಮಾಡಿ ಉಪಯುಕ್ತವಾದ ವಿಷಯಗಳನ್ನು ಸಂಗ್ರಹಿಸಲಾಯಿತು.

ಕೋಳಿಗಳಿಗೆ ಬರುವ ರೋಗಗಳನ್ನು ನಿವಾರಿಸಲು ವ್ಯಾಫಿರಾಟಿಕ್ ಕ್ರಮಗಳನ್ನು ಕಂಡುಹಿಡಿಯಲು ನಡೆಸುತ್ತಿರುವ ಪರಿಶೋಧನೆಗಳನ್ನು 1940-41ರಿಂದ ಇನ್ನೂ ಒಂದು ವರ್ಷ ಕಾಲದವರೆಗೂ ಮುಂದುವರಿಸಲಾಗುವುದು. ಇಂಪೀರಿಯರ್ ಕೌನ್ಸಿಲಿನವರು ಈ ಸಂಬಂಧದಲ್ಲಿ ದೊಡ್ಡ ಕಾರ್ಯಕ್ರಮವನ್ನು ಸದ್ಯದಲ್ಲಿಯೇ ಜಾರಿಗೆ ತರುವವರಾಗಿರುತ್ತಾರೆ. ಆಂಥ್ರಾಕ್ಸ್ ನಾಪೊನಿನ್ ವ್ಯಾಕ್ಸಿನು, ಆಂಟಿರಾಬಿಕ್ ವ್ಯಾಕ್ಸಿನು, ಗೊರಿನಾ ಅಫಘಾ ರೂಪ್‌ವ್ಯಾಕ್ಸಿನು, ಫೌಲ್‌ಪಾಕ್ಸ್ ವ್ಯಾಕ್ಸಿನು, ಪಾಲ್ಟ್ರಿ ವರ್ಮ್ ಕ್ಯಾಪ್ಸ್ಯೂಲ್, ರಾಣಿಕ್ಹೆಟ್ ವ್ಯಾಕ್ಸಿನ್, ರಾಣಿಕ್ಹೆಟ್ ಇಮ್ಯೂನ್‌ಸೀರಂ—ಇವೇ ಮೊದಲಾದುವುಗಳನ್ನು ಪಶುವೈದ್ಯ ಪರಿಶೋಧನಾಧಿಕಾರಿಗಳು ತಯಾರಿಸಿರುತ್ತಾರೆ. ಇವೂ ಅಲ್ಲದೆ ಜಾನುವಾರುಗಳನ್ನು ನಾಶಮಾಡುತ್ತಿರುವ ಹಲವು ರೋಗಗಳ ನಿವಾರಣಾ ನಂಬಂಧದಲ್ಲಿ ಅನೇಕ ಪರಿಶೋಧನೆಗಳನ್ನು ನಡೆಯಿಸುತ್ತಿದಾರೆ.

1939–40ನೇ ಇಸವಿಯಲ್ಲಿ ಜಾನುವಾರುಗಳಿಗೆ ಮತ್ತು ಕೋಳಿಗಳಿಗೆ ಬರುವ ರೋಗಗಳ ನಿವಾರಣೆಗಾಗಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ವ್ಯಾಕ್ಸಿನನ್ನು ತಯಾರಿಸಿರುತ್ತಾರೆ. ಇಲ್ಲಿ ತಯಾರಾದ ಔಷಧಿಗಳನ್ನು ಸಂಸ್ಥಾನದ ಹೊರಗಿನ ಪ್ರದೇಶಗಳಿಗೂ ಸಹ ಕಳುಹಿಸಲಾಯಿತು. ಮೈಸೂರು ಪಶುವೈದ್ಯದ ಇಲಾಖೆಗೂ ಸರಬರಾಯಿ ಮಾಡಲಾಯಿತು. 2,54,546 ಡೋಸು ವ್ಯಾಕ್ಸಿನನ್ನು ಹೊರನಾಡಿಗೂ, 3,64,932 ಡೋಸುಗಳನ್ನು ಪಶುವೈದ್ಯ ಇಲಾಖೆಗೂ ಒದಗಿಸಲಾಯಿತು.

ಪರಿಶೋಧನಾಲಯವನ್ನು ಬಡಾಯಿಸಲೂ ಇನ್‌ಸ್ಟಿಟ್ಯೂಟಿನ ಮ್ಯೂಜಿಯಮಿಗೂ ಇನ್ನೂ ಕೆಲವು ಕಟ್ಟಡಗಳನ್ನು ಕಟ್ಟಲೂ ಸರ್ಕಾರದವರು ಅನುಮತಿಯನ್ನು ಇತ್ತಿರುತ್ತಾರೆ. ಕಟ್ಟಡಗಳ ನಿರ್ಮಾಣ ಕಾರ್ಯವು ನಡೆಯುತ್ತಾ ಇದೆ.

ಸಂಸ್ಥಾನದಲ್ಲಿ ಗ್ರಾಮಪುನರುಜ್ಜೀವನ.

ಕುಡಿಯುವ ನೀರಿನ ಸರಬರಾಯಿ.

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಯಿಯ ಏರ್ಪಾಡಿಗೆ ಸರ್ಕಾರದವರು ಯಾವಾಗಲೂ ಗಮನವನ್ನು ಕೊಡುತ್ತಲೇ ಇದ್ದಾರೆ. ವಿದ್ಯುಚ್ಛಕ್ತಿ ಮತ್ತು ನೀರಿನ ಸರಬರಾಯಿಯ ವ್ಯವಸ್ಥೆಗಳಿಗಾಗಿ ಹೊಸದಾಗಿ ತೆರಿಗೆಗಳನ್ನು ವಿಧಿಸಲು 71 ಗ್ರಾಮಪಂಚಾಯಿತಿಗಳವರು ಸರ್ಕಾರದವರ ಮಂಜೂರಾತಿಯನ್ನು ಪಡೆದಿರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸರಬರಾಯಿಯ ವ್ಯವಸ್ಥೆಯ ಮೇರೆಗೆ ಸಂಸ್ಥಾನದ ನಾನಾ ಜಿಲ್ಲೆಗಳಿಗೆ 1939-40 ನೇ ಸಾಲಿನಲ್ಲಿ ಗ್ರಾಮಗಳಲ್ಲಿ ಬಾವಿಗಳನ್ನು ತೆಗೆಯಿಸಲು 3,25,000 ರೂಪಾಯಿಗಳನ್ನು ಹಂಚಲಾಯಿತು.

ಪಂಚಾಯಿತಿಗಳು ಎಂದಿನಂತೆಯೇ ಗ್ರಾಮಪುನರುಜ್ಜೀವನ ಕೇಂದ್ರಗಳಾಗಿದ್ದುವು. ಸಂಸ್ಥಾನದಲ್ಲಿ 11,941 ಪಂಚಾಯಿತಿಗಳಿವೆ. 89,656 ಮಂದಿ ಸದಸ್ಯರಿರುತ್ತಾರೆ. ಕಳೆದ ವರ್ಷಕ್ಕಿಂತ ಸದಸ್ಯರ ಸಂಖ್ಯೆಯು ಸ್ವಲ್ಪ ಹೆಚ್ಚಾಗಿದೆ. ಪಂಚಾಯಿತಿಗಳ ರೆಕ್ಕದಲ್ಲಿ 27,01,764 ರೂಪಾಯಿಗಳ ನಗದು ಶಿಲ್ಕು ಇದ್ದಿತು. ಪಂಚಾಯಿತಿಗಳ ವರಮಾನವು 9,96,492 ರೂ. ಗಳು. ಪೆಚ್ಚವು 12,51,478 ರೂಪಾಯಿಗಳಾಗಿದ್ದಿತು.

1939-40ನೇ ಸಾಲಿನ ಆದಿಯಲ್ಲಿ 45,90,050 ರೂಪಾಯಿಗಳಷ್ಟು ಕಂದಾಯವು ವಸೂಲಾಗಬೇಕಾಗಿದ್ದಿತು. ಪ್ರಸಕ್ತ ವರ್ಷದ ಕಂದಾಯವು 12,55,302 ರೂಪಾಯಿಗಳು. ಒಟ್ಟು ವಸೂಲಾಗಬೇಕಾಗಿದ್ದುದು 58,45,352 ರೂ. ಗಳು. ಇದರ ಪೈಕಿ ರೆಮಿಷನುಗಳೂ ಸೇರಿ 10,97,016 ರೂ. ಗಳು ಪ್ರಸಕ್ತ ವರ್ಷದಲ್ಲಿ ವಸೂಲಾದುವು. ವರ್ಷದ ಅಂತ್ಯದಲ್ಲಿ 47,48,336 ರೂಪಾಯಿಗಳ ಬಾಕಿ ಇದ್ದಿತು.

ಪ್ರಸಕ್ತ ವರ್ಷ ಗ್ರಾಮಪಂಚಾಯಿತಿಗಳವರು 12,51,478 ರೂಪಾಯಿಗಳನ್ನು ಪೆಚ್ಚಮಾಡಿದರು. ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ 5,04,615 ರೂಪಾಯಿಗಳನ್ನು ಪೆಚ್ಚಮಾಡಲಾಯಿತು.

ಗ್ರಾಮನಿರ್ಮಲೀಕರಣ ಮತ್ತು ಗ್ರಾಮಾರೋಗ್ಯ ರಕ್ಷಣೆಗಾಗಿ ಪಂಚಾಯಿತಿಗಳವರು 56,860 ರೂಪಾಯಿಗಳನ್ನು ಪೆಚ್ಚಮಾಡಿರುತ್ತಾರೆ. ಹಲವು ಪಂಚಾಯಿತಿಗಳವರು ಬೀದಿಯ ಕಸಗುಡಿಸುವವರನ್ನು ನೇಮಕಮಾಡಿಕೊಂಡಿರುತ್ತಾರೆ. ಕೆಲವು ಪಂಚಾಯಿತಿಗಳವರು ಸೋಕುಪಿಟ್ಟುಗಳನ್ನು ಮಾಡಿಸಿರುತ್ತಾರೆ. ಕೆಲವೆಡೆ ಚರಂಡಿಗಳನ್ನೂ, ಅಪ್ರೋಚ್ ರಸ್ತೆಗಳನ್ನು ನಿರ್ಮಿಸಿರುತ್ತಾರೆ. ಕೆಲವು ಗ್ರಾಮಗಳಲ್ಲಿ ಲಂಟಾನ ಮೊದಲಾದ ಮುಳ್ಳುಗಿಡಗಳನ್ನು ನಾಶಮಾಡಿದೆ. ಕೆಲವು ಗ್ರಾಮಗಳಲ್ಲಿ ಆದಿಕರ್ಣಾಟಕರಿಗೇ ಪ್ರತ್ಯೇಕವಾದ ಬಡಾವಣೆಗಳನ್ನೇರ್ಪಡಿಸಿದೆ. ಅಪ್ರೋಚು ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ, ವಾಸಕ್ಕೆ ಬಡಾವಣೆಗಳ ಏರ್ಪಾಡು, ಹಾಲಿ ಇರುವ ರಸ್ತೆಗಳ ಏರ್ಪಾಡು—ಇವೇ ಮೊದಲಾದ ಕಾಮಗಾರಿಗಳಿಗೆ ಹೆಚ್ಚಿನ ಗಮನವನ್ನು ಕೊಡಲಾಯಿತು. ಕುಡಿಯುವ ನೀರಿನ ಸರಬರಾಯಿಗಾಗಿ 3,62,732 ರೂಪಾಯಿಗಳನ್ನು ಪೆಚ್ಚ ಮಾಡಲಾಯಿತು. ಪ್ರಸಕ್ತ ವರ್ಷದಲ್ಲಿ 3,213 ಬಾವಿಗಳನ್ನು ತೋಡಿಸುವ ಕೆಲಸವನ್ನು ಕೈಗೊಂಡು, 1,603 ಬಾವಿಗಳನ್ನು ತೋಡಿಸಿಯಾಯಿತು. ಇವುಗಳ ಪೈಕಿ 798 ಸಾರ್ವಜನಿಕ ಬಾವಿಗಳು. 265 ಆದಿಕರ್ಣಾಟಕರಿಗಾಗಿ ಏರ್ಪಟ್ಟಿರುವ ಬಾವಿಗಳು. ಒಟ್ಟು 13,040 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿವೆ. 1,746 ಗ್ರಾಮಗಳಲ್ಲಿ ಆದಿಕರ್ಣಾಟಕರಿಗೆ ಪ್ರತ್ಯೇಕವಾದ ಬಾವಿಗಳಿವೆ. ವರ್ಷದ ಅಂತ್ಯದಲ್ಲಿ 2,150 ಬಾವಿಗಳ ಕೆಲಸವು ಇನ್ನೂ ನಡೆಯುತ್ತಿದ್ದಿತು. ಇವು ಸದ್ಯದಲ್ಲಿಯೇ ಮುಗಿಯುವುದಾಗಿದೆ.

ಗ್ರಾಮಸ್ಥರು ವಾರಕ್ಕೊಂದು ದಿನ ಗ್ರಾಮಕಾಮಗಾರಿಗಳಿಗಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಮಾಡಿದ ಕೆಲಸಗಳಿಗೆ ಕೂಲಿಯನ್ನು ಕೊಟ್ಟಿದ್ದರೆ, 1,52,622 ರೂಪಾಯಿಗಳನ್ನು ಪೆಚ್ಚಮಾಡಬೇಕಾಗಿದ್ದಿತು. 402 ಪಂಚಾಯಿತಿಗಳವರು ರೈತರಿಗೆ ಆಧುನಿಕ ವ್ಯವಸಾಯದ ಯಂತ್ರೋಪಕರಣಗಳನ್ನೂ, ಒಳ್ಳೆಯ ಬೀಜಗಳನ್ನೂ ಒದಗಿಸಿದರು. 360 ಪಂಚಾಯಿತಿಗಳವರು ಬೀಜದ ಹೋರಿಗಳನ್ನಿಟ್ಟಿರುತ್ತಾರೆ. ಉದ್ಯಾನಗಳು ಮತ್ತು ತೋಪುಗಳನ್ನು ಏರ್ಪಡಿಸಲು ಬಹಳ ಹೆಚ್ಚಿನ ಗಮನವನ್ನು ಕೊಡುತ್ತಿದೆ. 1,312 ಪಂಚಾಯಿತಿಗಳವರು ಪುಸ್ತಕಭಂಡಾರ ಅಥವಾ ವಾಚನಾಲಯಗಳನ್ನು ಸ್ಥಾಪಿಸಿ, ಉಪಯುಕ್ತವಾದ ಕನ್ನಡ ಪತ್ರಿಕೆಗಳನ್ನು ತರಿಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಒಕ್ಕಲೇರಿ ಮತ್ತು ಚೇಲೂರು ಗ್ರಾಮಗಳಲ್ಲಿಯೂ, ತುಮಕೂರು ಜಿಲ್ಲೆಯಲ್ಲಿ ಗೂಳೂರು ಗ್ರಾಮದಲ್ಲಿಯೂ, ಬೆಂಗಳೂರು ಜಿಲ್ಲೆಯಲ್ಲಿ ಸುಗ್ಗೇನ ಹಳ್ಳಿಯಲ್ಲಿಯೂ, ಸಾರ್ವಜನಿಕ ಉಪಯೋಗಕ್ಕಾಗಿ ರೇಡಿಯೋವನ್ನು ಇಡಲಾಯಿತು. ಗ್ರಾಮಾಂತರ ನಿವಾಸಿಗಳಿಗೆ ಈ ಏರ್ಪಾಡಿನಿಂದ ಬಹಳ ಅನುಕೂಲವಾಗಿದೆ. 151 ಗ್ರಾಮಗಳಿಗೆ ವಿದ್ಯುಚ್ಛಕ್ತಿಯ ಸರಬರಾಯಿ ಆಗಿದೆ. 46 ಗ್ರಾಮಗಳವರು ವ್ಯವಸಾಯಕ್ಕೆ ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆ. 11 ಗ್ರಾಮಗಳವರು ಕೈಗಾರಿಕೆಯ ಯಂತ್ರಗಳನ್ನು ನಡೆಯಿಸಲು ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆ.

ಗ್ರಾಮಾಂತರ ನಿವಾಸಿಗಳಿಗೆ ವೈದ್ಯ ಸಹಾಯವನ್ನು ನೀಡುವ ವಿಷಯವನ್ನು ಪಂಚಾಯಿತಿಗಳವರು ಆಸಕ್ತಿಯಿಂದ ಗಮನಿಸಿರುತ್ತಾರೆ. ಸರ್ಕಾರದವರೂ, ಜಿಲ್ಲಾ ಬೋರ್ಡುಗಳವರೂ ಇವರಿಗೆ ಸಹಾಯ ಮಾಡುತ್ತಿದ್ದಾರೆ. ಆಯುರ್ವೇದ ಮತ್ತು ಯುನಾನಿ ವೈದ್ಯಶಾಲೆಗಳನ್ನು ನಡೆಯಿಸಲು 154 ಗ್ರಾಮಗಳವರು 5,295 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ವರ್ಷದ ಕೊನೆಯಲ್ಲಿ ಸುಮಾರು 36 ಗ್ರಾಮಗಳಲ್ಲಿ ಸೂತಿಕಾಶಾಲೆಗಳಿದ್ದುವು. ಡಾ॥ ಬನ್ಸ್ಲರವರು ಕಂಡುಹಿಡಿದಿರುವ ಮಾರ್ಗದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹುಲ್ಲುಗಾವಲುಗಳ ವಿಸ್ತೀರ್ಣವನ್ನು ಹೆಚ್ಚಿಸುವ ಯೋಚನೆಯನ್ನು ಕೆಲವು ಗ್ರಾಮಗಳಲ್ಲಿ ಆಚರಣೆಗೆ ತರುತ್ತಿದೆ.

ಈಚೆಗೆ ನಡೆದ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳಲ್ಲಿ ಗ್ರಾಮಾಂತರದಲ್ಲಿ ವಾಸಿಸುವ ರೈತರು ಭಾಗವಹಿಸಿದ್ದರು. ಗ್ರಾಮಪುನರುಜ್ಜೀವನ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಪಟ್ಟ ಚರ್ಚೆಗಳಲ್ಲಿ ಅವರು ಬಹಳ ಆಸಕ್ತಿಯಿಂದ ಭಾಗವಹಿಸಿದ್ದರು. ಮಂಡ್ಯ, ತುಮಕೂರು, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ ಈ ಪ್ರದೇಶಗಳಲ್ಲಿ ನಡೆದ ಸಮ್ಮೇಳನಗಳ ಜತೆಗೆ ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನಗಳನ್ನೂ ಏರ್ಪಡಿಸಲಾಗಿದ್ದಿತು.

ಸಂಸ್ಥಾನದಲ್ಲಿ ಸಹಕಾರ ಸಂಘಗಳು.

ಈ ಸಂಸ್ಥೆಗಳ ಕೆಲಸ ಕಾರ್ಯಗಳು

1939–40ನೇ ಇಸವಿಯಲ್ಲಿ ಸಂಸ್ಥಾನದಲ್ಲಿ 1,895 ಸಹಕಾರ ಸಂಘಗಳಿದ್ದವು. ಪ್ರಸಕ್ತ ವರ್ಷದಲ್ಲಿ ಸದಸ್ಯರ ಸಂಖ್ಯೆಯು ಸ್ವಲ್ಪ ಹೆಚ್ಚಿದಂತೆ ಕಂಡುಬಂದರೂ, ಬಂಡವಾಳ ಮತ್ತು ಠೇವಣಾತಿಗಳ ಮೊತ್ತವು ಸ್ವಲ್ಪ ಕಡಿಮೆಯಾಗಿದ್ದಿತು. ವರ್ಕಿಂಗು ಕ್ಯಾಪಿಟಲ್, ರಿಜರ್ವ್ ಮತ್ತು ಇತರ ಫಂಡುಗಳೂ ಮತ್ತು ಸಾಲಗಳ ಮಂಜೂರಾತಿ ಮತ್ತು ವಸೂಲಾತಿ, ನಿವ್ವಳ ನಫೆ–ಇವೇ ಮೊದಲಾದ ವಿಷಯಗಳಲ್ಲಿ ಸಂಘಗಳ ಸ್ಥಿತಿಯು ಸ್ವಲ್ಪ ಉತ್ತಮಗೊಂಡಂತೆ ಕಂಡುಬಂದಿತು.

ಮೈಸೂರು ಪ್ರೊವಿಷಿಯಲ್ ಸಹಕಾರದ ಅಪೆಕ್ಸ್ ಬ್ಯಾಂಕಿನ ಬಂಡವಾಳ ಮತ್ತು ಠೇವಣಿಯ ಮೊತ್ತವು ಸ್ವಲ್ಪ ಕಡಿಮೆಯಾದರೂ, ರಿಜರ್ವ್ ಫಂಡಿನ ಮೊತ್ತವು ಸ್ವಲ್ಪ ಹೆಚ್ಚಾಗಿದ್ದಿತು. ಈ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯನ್ನು ಮತ್ತು ವಹಿವಾಟನ್ನು ಇನ್ನೂ ಉತ್ತಮಗೊಳಿಸಬೇಕೆಂಬ ಉದ್ದೇಶದಿಂದ ಸರ್ಕಾರದವರು ಐದು ಲಕ್ಷ ರೂಪಾಯಿಗಳ ನಗದು ಸಾಲವನ್ನು ಮಂಜೂರು ಮಾಡಿರುತ್ತಾರೆ. ಈ ಮೊಬಲಗಿನಲ್ಲಿ ಬ್ಯಾಂಕಿನವರು ಎರಡು ಲಕ್ಷ ರೂಪಾಯಿಗಳನ್ನು ಪ್ರಸಕ್ತ ವರ್ಷದಲ್ಲಿಯೇ ತೆಗೆದುಕೊಂಡಿರುತ್ತಾರೆ. ತಾವು ತೆಗೆದುಕೊಂಡ ಸಾಲಗಳನ್ನು ತೀರಿಸುವುದರಲ್ಲಿ ನಿಜವಾದ ಆಸಕ್ತಿಯನ್ನು ತೋರಿಸಿದ ಸಹಕಾರ ಸಂಘಗಳಿಗೆ ಹಿಂದಿನಂತೆಯೇ ಪ್ರಸಕ್ತ ವರ್ಷದಲ್ಲಿ ರಿಯಾಯಿತಿಗಳನ್ನು ತೋರಿಸಲಾಯಿತು. ಸಾಲವನ್ನು ಪಡೆದಿರುವ 400 ಸಂಘಗಳ ಪೈಕಿ 186 ಸಂಘಗಳು ಈ ರಿಯಾಯಿತಿಯನ್ನು ಪಡೆದುವು.

ಅಂಜೂರ, ಬತ್ತ, ಬಾಳೆಯಹಣ್ಣು, ಕೋಳಿಯಮೊಟ್ಟೆಗಳು, ಅಲೂಗಡ್ಡೆ, ಶುಂಠಿ, ಕಿತ್ತಲೆಹಣ್ಣು, ತೆಂಗು ಮತ್ತು ಕೊಬ್ಬರಿ, ಮತ್ತು ಜೇನುಮೇಣ, ಏಲಕ್ಕಿ, ಅಡಿಕೆ, ಇವೇ ಮೊದಲಾದುವುಗಳನ್ನು ಮಾರಾಟಮಾಡಲು 12 ಮಾರಾಟದ ಸಹಕಾರ ಸಂಘಗಳಿದ್ದುವು. ಮರಡಿಪಳ್ಳಿಯ ಸಹಕಾರ ಸಂಘವು ಹತ್ತಿಯ ವ್ಯವಸಾಯಗಾರರಿಗೆ ಒಳ್ಳೆಯ ಬೀಜ, ವ್ಯವಸಾಯದ ಸಲಕರಣೆ ಇವುಗಳನ್ನು ಒದಗಿಸುತ್ತಿರುವುದೂ ಅಲ್ಲದೆ, ಅವರು ಬೆಳೆದ ಹತ್ತಿಯನ್ನೂ, ಅವರು ತಯಾರಿಸಿದ ಹತ್ತಿಯ ಬಟ್ಟೆಗಳನ್ನೂ ಮಾರಾಟ ಮಾಡಲೂ ಸಹ ಏರ್ಪಾಟು ಮಾಡಿದೆ. ಮಲೆನಾಡಿನಲ್ಲಿ ಅಡಿಕೆ ಮಾರಾಟದ ಸಂಘವು ಕಳೆದ ವರ್ಷ ಪ್ರಾರಂಭವಾಯಿತು. ಈ ಸಂಘವು ಚೆನ್ನಾಗಿ ಕೆಲಸ ಮಾಡುತ್ತಿದೆ. 682 ಮಂದಿ ಸದಸ್ಯರ ಪೈಕಿ 548 ಮಂದಿ ಸದಸ್ಯರು 26,035 ಮಣ ಅಡಿಕೆಯನ್ನು ಮಾರಾಟಕ್ಕಾಗಿ ಸಂಘಕ್ಕೆ ಕೊಟ್ಟಿರುತ್ತಾರೆ. ಸಂಘದವರು 8 054 ಮಣಗಳನ್ನು 64,432 ರೂಪಾಯಿಗಳಿಗೆ ಮಾರಿದರು. ಸಂಘದವರು ಬಳ್ಳಾರಿಯಲ್ಲಿ ತಮ್ಮ ಶಾಖೆಯೊಂದನ್ನು ತೆರೆದಿರುತ್ತಾರೆ. ಪ್ರಾರಂಭದ ವೆಚ್ಚಗಳಿಗಾಗಿ ಸರ್ಕಾರದವರು ಈ ಸಂಘಕ್ಕೆ 3,000 ರೂಪಾಯಿಗಳ ಸಬ್‌ವೆಷನ್ನು ಕೊಟ್ಟಿರುತ್ತಾರೆ.

ಪ್ರಸಕ್ತ ವರ್ಷದ ಅಂತ್ಯದಲ್ಲಿ 39 ತಾಲ್ಲೂಕುಗಳಲ್ಲಿಯೂ, ನಾಲ್ಕು ಸಬ್-ತಾಲ್ಲೂಕುಗಳಲ್ಲಿಯೂ, ಇನ್ನು ಮೂರು ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಜಮೀನು ಅಡಮಾನದ ಬ್ಯಾಂಕಿನ ಏರ್ಪಾಡು ಜಾರಿಯಲ್ಲಿದ್ದಿತು. ಈ ಏರ್ಪಾಡನ್ನು ಇನ್ನೂ ಜಾಗ್ರತೆಯಾಗಿ ವಿಸ್ತರಿಸುವ ಉದ್ದೇಶದಿಂದಲೂ, ಸಾಲ ಕೊಟ್ಟ ಹಣಕ್ಕೆ ಮೋಸವಿಲ್ಲದಂತೆ ಈ ಸಹಕಾರ ಚಳುವಳಿಯು ಸುವ್ಯವಸ್ಥಿತವಾಗಿ ಬೆಳೆಯಿಸಲು ಸಹಾಯವಾಗಲು ಸರ್ಕಾರದವರು ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರರನ್ನು ನೇಮಕಮಾಡಲು ಅನುಮತಿಯನ್ನು ಕೊಟ್ಟಿರುತ್ತಾರೆ.

(Central Land Mortgage Bank) ಜಮೀನು ಅಡವಾನದ ಕೇಂದ್ರ ಸಂಸ್ಥೆಯು ಪ್ರಸಕ್ತ ವರ್ಷದಲ್ಲಿಯೂ ಉತ್ತಮರೀತಿಯಲ್ಲಿ ಕೆಲಸಮಾಡಿತು. ಐದನೇ ಬಾರಿ ಶೇಕಡಾ 3½ರ ಬಡ್ಡಿಯ ಡಿಬೆಂಚರು ಪತ್ರಗಳನ್ನು ಸರ್ಕಾರದವರು ಮಂಜೂರುಮಾಡಿದರಷ್ಟೆ. ಇದರಿಂದ 125 ಲಕ್ಷರೂಪಾಯಿಗಳ ಬಂಡವಾಳವು ಶೇಖರವಾಯಿತು. ವಸೂರಾತಿಯು ಚನ್ನಾಗಿದೆ. ಕಳೆದ ವರ್ಷ 1,05,195 ರೂಪಾಯಿಗಳು ವಸೂರಾದುದಕ್ಕೆ ಪ್ರಸಕ್ತ ವರ್ಷವು 1,02,525 ರೂಪಾಯಿಗಳು ವಸೂರಾದುವು. ವಸೂರಾಗಬೇಕಾದ ಮೊಬಲಗಿನ ಶೇಕಡ 10·95 ರಷ್ಟು ವಸೂರಾಗದೆ ನಿಂತಿದ್ದುದು ಪ್ರಸಕ್ತ ವರ್ಷ 295ರಷ್ಟು ಮಾತ್ರ ಬಾಕಿ ಇದ್ದಿತು. ಈ ಸಂಸ್ಥೆ ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ಕೊಡಲು ಸಹಾಯವಾಗುವಂತೆಯೂ, ಮತ್ತು ಆಪತ್ಕಾಲದ ವೆಚ್ಚಕ್ಕಾಗಿಯೂ, ಪ್ರಸಕ್ತ ವರ್ಷದಲ್ಲಿಯೂ ಸಹ ಹಿಂದಿನಂತೆಯೇ 5,000½—ರೂಪಾಯಿಗಳ ಸಬ್‌ವೆಷನ್ನು ಮಂಜೂರು ಮಾಡಿದರು.

ಮೈಸೂರು ಸಹಕಾರದ ಇನ್‌ಸ್ಟಿಟ್ಯೂಟಿನವರು ಪ್ರಸಕ್ತ ವರ್ಷದಲ್ಲಿಯೂ ಸಹ ಸಂಘಗಳ ಆಡಳಿತ ವರ್ಗದವರಿಗೂ, ಕೆಲಸಗಾರರಿಗೂ ಮತ್ತು ಇತರರಿಗೂ ಶಿಕ್ಷಣ ತರಗತಿಗಳನ್ನೇರ್ಪಡಿಸಿದ್ದರು.

ಮೈಸೂರು ಇಕನಮಿಕ್ ಜರ್ನಲ್ ಯಾವ ವರ್ತಮಾನ ಪತ್ರಿಕೆಯೊಡನೆಯೂ ಸ್ಪರ್ಧಿಸಲು ಹೊರಟಿಲ್ಲ. ಇದರಲ್ಲಿರುವ ಸಮಾಚಾರವನ್ನು ಯಾರು ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಇಚ್ಛೆಯಿದ್ದಲ್ಲಿ ಇಕನಮಿಕ್ ಜರ್ನಲ್‌ನಿಂದ ತೆಗೆದುಕೊಂಡಿರುವುದಾಗಿ ಹೇಳಬಹುದು. ಇಲ್ಲವಾದರೆ ಬೇಕಿಲ್ಲ.

ಸಂಸ್ಥಾನದ ಚಿನ್ನದ ಗಣಿಗಳು.

ಕೋಲಾರದ ಚಿನ್ನದ ಗಣಿಯಲ್ಲಿ 8,743 ಅಡಿಗಳಷ್ಟು ಕೆಳಗಿನವರೆಗೂ ಭೂಮಿಯನ್ನು ಅಗೆದು ಅಲ್ಲಿಂದ ಚಿನ್ನವನ್ನು ತೆಗೆಯುತ್ತಿದ್ದಾರೆ. ಸದ್ಯದಲ್ಲಿ ಭೂಗರ್ಭದಲ್ಲಿ ಅಷ್ಟು ಕೆಳಗಿನ ಪ್ರದೇಶದಲ್ಲಿ ಸುಸೂತ್ರವಾಗಿ ಕೆಲಸ ಮಾಡಲು ತಕ್ಕಷ್ಟು ಪ್ರಮಾಣದಲ್ಲಿ ತಂಪಾದ ಗಾಳಿಯನ್ನೊದಗಿಸಲು ತಿಳಿದಿರುವ ಎಲ್ಲ ಸೌಕರ್ಯಗಳನ್ನೂ ಒದಗಿಸಲಾಗಿದೆ. ಟಾಂಪಿರ್ಯ್ ರೀಫ್ ಗಣಿಯಲ್ಲಿ ನೆಲದೊಳಗೆ ಕೆಲಸಮಾಡುವಾಗ ಅಲ್ಲಿ ವಾಯುವಿಗೆ ತಕ್ಕಷ್ಟು ಆರ್ದ್ರತೆಯಿರುವಂತೆ "ಆಮೋನಿಯಾ ಕಂಪ್ರೆಸರ್ ಚ್ಯಿಪ್ಲು ಏರ್‌ಕಂಡಿಷನಿಂಗು ಪ್ಲಾಂಟೊಂದನ್ನು ಕಟ್ಟುತ್ತಿದೆ." ಕೆಲಸ ಕಾರ್ಯಗಳು ಇನ್ನೇನು ಮುಗಿಯುವುದರಲ್ಲಿವೆ. ಎಲ್ಲ ಗಣಿಗಳಲ್ಲಿಯೂ ಮುಖ್ಯವಾದ ವಾಯುಮಾರ್ಗಗಳಲ್ಲಿ ಶಕ್ತಿಯಿಂದ ನಡೆಯುವ ದೊಡ್ಡ ಫ್ಯಾನುಗಳನ್ನು ಇಡಲಾಗಿದೆ. ಇತರ ಕಡೆಗಳಲ್ಲಿ ಸಣ್ಣಸಣ್ಣ ಫ್ಯಾನುಗಳನ್ನು ಇಡಲಾಗಿದೆ.

ಗಣಿಗಳಲ್ಲಿ, 1939ನೇ ಇಸವಿಯಲ್ಲಿ 26,449 ಮಂದಿ ಕೆಲಸಗಾರರಿದ್ದರು. ಈ ವರ್ಷದಲ್ಲಿ (1939) 314,501,313 ಔನ್ಸುಗಳಷ್ಟು ಚಿನ್ನವನ್ನು ತೆಗೆಯಲಾಯಿತು. ಇದರ ಬೆಲೆ 2,437,395 ಪೌಂಡುಗಳು. 1940ನೆಯ ಇಸವಿ ಮಾರ್ಚ್ ತಿಂಗಳಿನಲ್ಲಿ ಚಿನ್ನದ ಮೇಲೆ ಅದರ ಬೆಲೆಯು ಔನ್ಸಿಗೆ 100 ರೂಪಾಯಿಗಳಿಗೆ ಏರಿದಾಗ ತೆರಿಗೆಯೊಂದನ್ನು ವಿಧಿಸುವ ಕಾನೂನನ್ನು ಜಾರಿಗೆ ತರಲಾಯಿತಷ್ಟೆ. ಕಂಪೆನಿಯವರು 1940ನೆಯ ಮಾರ್ಚ್ 22ನೆಯ ತಾರೀಖಿನ ರಾಗಾಯಿತು ಜೂನ್ ತಿಂಗಳ ಕಡೆಗುವರೆಗೂ, ಇಲ್ಲಯವರೆಗೂ ತೆಗೆಯಲಾದ ಚಿನ್ನದ ಮೇಲೆ 8,66,768 ರೂಪಾಯಿಗಳನ್ನು ಮೇಲೆ ಹೇಳಿದ ತೆರಿಗೆಯಾಗಿ ಕೊಡಬೇಕಾಗಿದೆ. 1939-40ನೆಯ ಇಸವಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ 3,85,467 ರೂಪಾಯಿಗಳನ್ನು ಪಾವತಿ ಮಾಡಿರುತ್ತಾರೆ. ಉಳಿದ ಮೊಬಲಗನ್ನು ಕಾನೂನಿನ ಪ್ರಕಾರ ಮುಂದಿನ ತಿಂಗಳುಗಳಲ್ಲಿ ಅವರು ಕೊಡಬೇಕಾಗಿದೆ.

ಶಾಸನ ಸಭೆಗಳಿಗೆ ಚುನಾವಣೆಗಳು.

ಚುನಾವಣಾ ಪತ್ರಗಳ ತಿರಸ್ಕಾರ.

ಚುನಾವಣಾ ಪತ್ರಗಳು ತಿರಸ್ಕೃತವಾದ ಪ್ರಯುಕ್ತ ನ್ಯಾಯವಿಧಾಯಕ ಸಭೆಗೆ ಹತ್ತು ಸ್ಥಾನಗಳೂ, ಪ್ರಜಾಪ್ರತಿನಿಧಿ ಸಭೆಗೆ 61 ಸ್ಥಾನಗಳೂ ಇತರರಿಂದ ಧರ್ತಿಮಾಡಲ್ಪಟ್ಟಿವೆ. ಇವುಗಳ ಪೈಕಿ ನ್ಯಾಯವಿಧಾಯಕ ಸಭೆಯ 6 ಉಮೇದುವಾರರ ಪತ್ರಗಳೂ, ಪ್ರಜಾಪ್ರತಿನಿಧಿ ಸಭೆಯ 16 ಉಮೇದುವಾರರ ಪತ್ರಗಳೂ ಪ್ರಬಲವಾದ ಕಾರಣಗಳ ಮೇಲೆ ತಿರಸ್ಕೃತವಾಗಿವೆ. ಹೀಗೆ ತಿರಸ್ಕಾರ ಮಾಡಿರುವುದಕ್ಕೆ ನ್ಯಾಯಸ್ಥಾನಗಳ ತೀರ್ಮಾನಗಳ ಆಧಾರಗಳಿವೆ. ನ್ಯಾಯವಿಧಾಯಕ ಸಭೆಗೆ ಇತರ ನಾಲ್ಕು ಸ್ಥಾನಗಳ, ಪ್ರಜಾಪ್ರತಿನಿಧಿ ಸಭೆಗೆ 45 ಸ್ಥಾನಗಳ ಉಮೇದುವಾರರ ಪತ್ರಗಳು ವಯಸ್ಸನ್ನು ಅಥವಾ ಜನ್ಮದಿನವನ್ನು ನೂಚಿಸದಿರುವುದು, ದಿನಾಮಿನೇಷ್ಟ್ ಕಾಲಮನ್ನು ಸರಿಯಾಗಿ ಧರ್ತಿಮಾಡದಿರುವುದು, ಇಂತಹುದೇ ಮೊದಲಾದ ಸಾಮಾನ್ಯ ಕಾರಣಗಳಿಗಾಗಿ ತಿರಸ್ಕೃತವಾಗಿವೆ ಎಂದು ಬಹುಶಃ ಥಾವಿಸಬಹುದು.

ಕಾಂಗ್ರೆಸು ಉಮೇದುವಾರರಿಗೆ ವಿರೋಧ ಕ್ರಿಯೆಯಲ್ಲ.

ಕೆಲವು ವೃತ್ತಪತ್ರಿಕೆಗಳವರು ಕಾಂಗ್ರೆಸಿನವರನ್ನು ಏನಾದರೂ ನೆಪವನ್ನು ಹುಡುಕಿ ಶಾಸನ ಸಭೆಗಳಿಂದ ಹೊರವಾಗಿಡಲು ಈ ರೀತಿ ಮಾಡಲಾಗಿದೆ ಎಂಬುದಾಗಿ ಸೂಚಿಸಿರುತ್ತಾರೆ. ವಾಸ್ತವಿಕವಾಗಿ, ವಯಸ್ಸು, ಜನ್ಮದಿನ, ಇವುಗಳನ್ನು ಸೂಚಿಸದೆ ಇದ್ದುದಕ್ಕಾಗಿ ಅರ್ಜಿಗಳು ತಿರಸ್ಕೃತವಾಗಿರುವುದು ಮಂಡ್ಯ, ಕೋಲಾರ, ಚಿತ್ರದುರ್ಗ ಈ ಮೂರು ಜಿಲ್ಲೆಗಳಲ್ಲಿ ಮಾತ್ರವೇ. ಪತ್ರಿಕೆಗಳವರು ಸೂಚಿಸಿದಂತೆ ಕಾಂಗ್ರೆಸಿನವರನ್ನು ಸಭೆಗಳಿಂದ ಹೊರವಾಗಿಡಬೇಕೆಂಬ ಉದ್ದೇಶವೇನಾದರೂ ಇದ್ದರೆ ಎಲ್ಲ ಜಿಲ್ಲೆಗಳಲ್ಲಿಯೂ ಹೀಗೆಯೇ ಅರ್ಜಿಗಳನ್ನು ತಿರಸ್ಕರಿಸಿ ಬಿಡಬಹುದಾಗಿದ್ದಿತು. ಆಲ್ಲದೆ ಹಲವುಮಂದಿ ಸ್ವತಂತ್ರ ಪಕ್ಷದ ಉಮೇದುವಾರರ ಮತ್ತು ಮುಸಲ್ಮಾನ ಉಮೇದುವಾರರ ಅರ್ಜಿಗಳೂ ಸಹ ತಿರಸ್ಕೃತವಾಗಿವೆ ಎಂಬುದನ್ನು ಮರೆಯಬಾರದು.

ನ್ಯಾಯವಿಧಾಯಕ ಸಭೆ, ಪ್ರಜಾಪ್ರತಿನಿಧಿ ಸಭೆ ಮೊದಲಾದ ಜವಾಬ್ದಾರಿಯುತ ಸಂಸ್ಥೆಗಳಿಗೆ ಪ್ರತಿನಿಧಿಗಳಾಗಲು ಬಯಸುವವರು ಚುನಾವಣಾ ಪತ್ರಗಳನ್ನು ಸರಿಯಾಗಿ ಧರ್ತಿಮಾಡಿ ಕಳುಹಿಸಲೇಬೇಕೆಂದು ನಿರೀಕ್ಷಿಸುವುದು ನ್ಯಾಯವಾಗಿದೆ. ಆದರೆ, ಸದ್ಯದ ಸಂದರ್ಭದಲ್ಲಿ ಅವರು ಹಾಗೆ ಮಾಡದೇ ಇರುವುದಕ್ಕಾಗಿ ವಿಷಾದಿಸಬೇಕಾಗಿದೆ. ಉದಾಹರಣೆಗಾಗಿ, ಒಬ್ಬ ಉಮೇದುವಾರರು ದಿನಾಮಿನೇಷ್ಟ್ ಕಾಲಮ್ಮಿನಲ್ಲಿ "ಅನೆ" ಎಂದು ಬರೆದಿರುತ್ತಾರೆ.

ತಪ್ಪು ವರದಿ.

ಶ್ರೀ ಇಂದಿರಮ್ಮ ಎಂಬುವರ ಅರ್ಜಿಯನ್ನು, ಓಟರುಗಳ ಪಟ್ಟಿಯಲ್ಲಿ ಅವರ ಹೆಸರು ಇಂದಿರಮ್ಮನವರು ಎಂದಿದ್ದು, ಅರ್ಜಿಯಲ್ಲಿ ಇಂದಿರಮ್ಮ ಎಂದು ಸಹಿಮಾಡಿದರೆಂಬ ಕಾರಣದಿಂದ ತಿರಸ್ಕರಿಸಲಾಯಿತೆಂದು ಸೂಚಿತವಾಗಿದೆ. ಇದು ಸರಿಯಾದ ವರ್ತಮಾನವಲ್ಲ. ಈ ಮಹಿಳೆಯರ ಅರ್ಜಿಯನ್ನು ಈ ಸಣ್ಣ ಕಾರಣಕ್ಕಾಗಿ ತಿರಸ್ಕರಿಸಿಲ್ಲ. ಇವರು 1934ನೆಯ ಇಸವಿ ಡಿಸೆಂಬರ್ 17ನೇ ತಾರೀಖು ತಾವು ಮಾಡಿದ ವಿಮಾ ಪತ್ರದಲ್ಲಿ (ಮೈಸೂರು ಸರ್ಕಾರದ ಪ್ರಜಾ ಶಾಖೆಯಲ್ಲಿ) ತಮ್ಮ ಜನ್ಮದಿನವು 1915ನೆಯ ಇಸವಿ ಜುಲೈ 1ನೇ ತಾರೀಖು ಎಂದು ನಮೂದಿಸಿರುತ್ತಾರೆ. ಆದರೆ, ಚುನಾವಣಾ ಅರ್ಜಿಯಲ್ಲಿ ಮಾತ್ರ ಜನ್ಮದಿನವು 1ನೇ ಜೂನ್ 1914 ಎಂಬುದಾಗಿ ನಮೂದಿಸಿರುತ್ತಾರೆ. ಈ ಕಾರಣಕ್ಕಾಗಿ ಇವರ ಅರ್ಜಿಯು ತಿರಸ್ಕೃತವಾಯಿತು.

ಬ್ರಿಟಿಷ್ ಇಂಡಿಯಾದ ಚುನಾವಣಾಕ್ರಮದ ದೃಷ್ಟಿಯಿಂದ ಈ ವಿಷಯವನ್ನು ಪರಿಶೀಲಿಸುವುದು ಸರಿಯಲ್ಲ. ಮೈಸೂರಿನ ಚುನಾವಣಾ ಕ್ರಮವೇ ಬೇರೆ. ಬ್ರಿಟಿಷ್ ಇಂಡಿಯಾದಲ್ಲಿ ಉಮೇದುವಾರನೇ ಅರ್ಜಿಯನ್ನು ಸಲ್ಲಿಸುವುದಿಲ್ಲ. ಇತರರು ಯಾರಾದರೂ ಚುನಾವಣಾ ಪತ್ರವನ್ನು ಥರ್ತಿಮಾಡುತ್ತಾರೆ. ಒಬ್ಬರು ಸೂಚಿಸುತ್ತಾರೆ. ಮತ್ತೊಬ್ಬರು ಅನುಮೋದಿಸುತ್ತಾರೆ. ಉಮೇದುವಾರನು ನಾಮಿನೇಷನ್ನನ್ನು ಒಪ್ಪಿಕೊಳ್ಳುತ್ತಾನೆ. ಅಲ್ಲದೆ, ಓಟರುಗಳ ಪಟ್ಟಿಯಲ್ಲಿ ಒಬ್ಬ ಮನುಷ್ಯನ ಹೆಸರು ಇದ್ದರೆ ಸಾಕು. ಅತನ ವಯಸ್ಸು ಎಷ್ಟೆಂಬ ವಿಷಯವನ್ನು ಗಮನಿಸುವುದೇ ಇಲ್ಲ. ಇತರ ಎಲ್ಲ ಕಲಮುಗಳಿಗೂ ಸೂಕ್ತವಾದ ರೀತಿಯಲ್ಲಿ ವಿವರಗಳನ್ನು ಸೂಚಿಸಿದರೆ ಸಾಕು. ವಯಸ್ಸನ್ನು ತಿಳಿಸಿದರೆ ತಿಳಿಸಬಹುದು. ತಿಳಿಸಲೇಬೇಕೆಂಬ ವಿಧಿಯೇನೂ ಇಲ್ಲ.

ಮೈಸೂರಿನಲ್ಲಿಯಾದರೋ, ಉಮೇದುವಾರನೇ ಚುನಾವಣಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸುತ್ತಾನೆ. ಅತನ ಹೆಸರು ಓಟರುಗಳ ಪಟ್ಟಿಯಲ್ಲಿ ಇದ್ದ ಮಾತ್ರಕ್ಕೇ ಅತನು ಉಮೇದುವಾರನಾಗಿ ನಿಲ್ಲಲು ಅರ್ಹತೆಯುಂಟಾಗುವುದಿಲ್ಲ. ಉಮೇದುವಾರನ ವಯಸ್ಸು ಎಷ್ಟಾಗಿದೆ ಎಂಬುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದೆ. ಪ್ರಜಾಪ್ರತಿನಿಧಿ ಸಭೆಗೆ ಉಮೇದುವಾರರಾಗಿ ನಿಲ್ಲುವವರಿಗೆ 25 ವರ್ಷ ವಯಸ್ಸಾಗಿರಲೇಬೇಕು. ನ್ಯಾಯವಿಧಾಯಕ ಸಭೆಗೆ ನಿಲ್ಲುವವರಿಗೆ 30 ವರ್ಷ ವಯಸ್ಸಾಗಿರಲೇಬೇಕು. ಹೀಗಿರುವುದರಿಂದ ಉಮೇದುವಾರರು ತಮ್ಮ ಚುನಾವಣಾ ಪತ್ರದಲ್ಲಿ ವಯಸ್ಸು ಮತ್ತು ಜನ್ಮದಿನವನ್ನು ಸೂಚಿಸುವುದು ಅತ್ಯಾವಶ್ಯಕವಾಗಿದೆ. ಆದುದರಿಂದ, ನಿರ್ದಿಷ್ಟವಾದ ರೀತಿಯಲ್ಲಿ ಉಮೇದುವಾರನು ತನಗೆ ಅವಶ್ಯಕವಾದ ಅರ್ಹತೆಯಿದೆಯೇ ಇಲ್ಲವೇ ಎಂಬುದನ್ನು ಸೂಚಿಸಬೇ ಇರುವುದು ಅಥವಾ ಚುನಾವಣಾಧಿಕಾರಿಗಳು ಉಮೇದುವಾರನಿಗೆ ತಕ್ಕ ಅರ್ಹತೆಯಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ತಕ್ಕಷ್ಟು ವಿವರಗಳನ್ನು ಒದಗಿಸದೇ ಇರುವುದು, ವರ್ಪಟ್ಟಿರುವ ನಿಯಮಗಳಿಗೆ ಸರಿಯಾಗಿ ನಡೆದುಕೊಂಡಂತಾಯಿತೆಂದು ಹೇಳುವಹಾಗಿಲ್ಲ.

ಸರ್ಕಾರದವರು ಪ್ರವೇಶಿಸುವುದು ಯುಕ್ತವಲ್ಲ.

ಪ್ರಜಾಪ್ರತಿನಿಧಿ ಸಭೆಯ ನಿಬಂಧನೆಗಳ 203ನೇ ನಿಬಂಧನೆಯು ಮೇರೆಗೆ ತಮಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರದವರು ತಿರಸ್ಕೃತವಾದ ಅರ್ಜಿಗಳನ್ನು ಪುನಃ ಪುರಸ್ಕರಿಸಬೇಕೆಂದು 90 ಅರ್ಜಿಗಳು ಬಂದಿವೆ. ಈ ಕಾನೂನಿನ ಮೇರೆಗೆ ವರ್ಪಟ್ಟ ಚುನಾವಣಾ ವಿಮರ್ಶೆಗೆ ಸಂಬಂಧಪಡದ ಇತರ ಯಾವುದಾದರೂ ವಿಷಯದಲ್ಲಿ ನಿಬಂಧನೆಗಳ ಅರ್ಥವಿವರಣೆಯಾಗ ಬೇಕಾಗಿದ್ದ ಸಂದರ್ಭದಲ್ಲಿ ಆ ವಿಷಯವನ್ನು ಸರ್ಕಾರದವರ ಪರಿಶೀಲನೆಗೆ ಕಳುಹಿಸತಕ್ಕುದು. ಮತ್ತು ಅವರ ನಿರ್ಧಾರವೇ ಕಡೆಯದಾಗಿರತಕ್ಕುದು. ಎಂಬುದಾಗಿ ಆ ನಿಬಂಧನೆಯಲ್ಲಿ ಸೂಚಿತವಾಗಿದೆ. ನಿಬಂಧನೆಗಳ ಅರ್ಥ ವಿವರಣೆಯನ್ನು ಮಾಡಲು ಸರ್ಕಾರದವರಿಗೆ ಅಧಿಕಾರವಿದೆ. ಆದರೆ, ಈ ರೀತಿ ಅವರು ಮಾಡಿದ ಅರ್ಥ ವಿವರಣೆಯಿಂದ, ಆದಕ್ಕೆ ಮುಂಚೆ ಅಧಿಕಾರಿಗಳು ಮಾಡಿರುವ ನಿರ್ಣಯವನ್ನು ಬದರಾಯಿಸಲಾಗುವುದಿಲ್ಲವೆಂಬುದು ವ್ಯಕ್ತವಾಗಿಯೇ ಇದೆ. ಆದುದರಿಂದ, ಸರ್ಕಾರದವರು ಚುನಾವಣಾಧಿಕಾರಿಗಳು ಈಗಾಗಲೇ ಮಾಡಿರುವ ನಿರ್ಣಯವನ್ನು ಬದರಾಯಿಸಲು ಸಾಧ್ಯವಿಲ್ಲ.

ಅಲ್ಲದೆ, ಚುನಾವಣಾಧಿಕಾರಿಗಳ ನಿರ್ಣಯವು ನ್ಯಾಯಾಧೀಶರ ನಿರ್ಣಯಗಳಿಗೆ ಸಮಾನವಾದುದು. ಆದುದರಿಂದ, ಅಂತಹ ನಿರ್ಣಯಗಳ ಸಂಬಂಧದಲ್ಲಿ ಸರ್ಕಾರದವರು ಪ್ರವೇಶಿಸುವುದು ಯುಕ್ತವಲ್ಲ. ಮತ್ತು ಅಂತಹ ನಿರ್ಣಯಗಳನ್ನು ವಿಮರ್ಶೆ ಮಾಡಲು ಕಾನೂನು ಮೂಲಕ ನ್ಯಾಯಸ್ಥಾನವನ್ನೇರ್ಪಡಿಸಿದೆ. ತಮ್ಮ ಅರ್ಜಿಗಳು ತಿರಸ್ಕೃತವಾದ ಉಮೇದುವಾರರು ಕಾನೂನಿಗನುಸಾರವಾಗಿ ಚುನಾವಣಾ ಹೊಕದ್ದಮೆಯನ್ನು ಹೂಡಬಹುದು. ಪ್ರಜಾಪ್ರತಿನಿಧಿ ಸಭೆಯ ನಿಬಂಧನೆಗಳ 187 ನಿಬಂಧನೆಗನುಸಾರವಾಗಿ, ಯಾವುದಾದರೂ ಚುನಾವಣಾ ಪತ್ರವನ್ನು ಅನ್ಯಾಯವಾಗಿ ತಿರಸ್ಕರಿಸಿರುವುದರಿಂದ ಅಥವಾ ಪುರಸ್ಕರಿಸಿರುವುದರಿಂದ, ಚುನಾವಣೆಗಳ ಮೇಲೆ ಪರಿಣಾಮವುಂಟಾಗಿದ್ದರೆ, ಆ ಸ್ಥಾನದಲ್ಲಿ ಚುನಾಯಿತನಾದ ಉಮೇದುವಾರನ ಚುನಾವಣೆಯು ರದ್ದಾಗುವುದೆಂದೂ ಸಹ ಸೂಚಿತವಾಗಿದೆ.

ಜರ್ಮನರ ಮತ್ತು ಇಟಾಲಿಯನರ ಆಕಾಶವಾಣಿಗಳು.

ಸುಳ್ಳಿನ ಕಂತೆಗಳು.

ಇಂಗ್ಲೀಷಿನಲ್ಲಿ ಆಕಾಶವಾಣಿ.

ಈಚೆಗೆ, ಯೂರೋಪಿನಲ್ಲಿ ತಾಟಸ್ಥ್ಯ ರಾಷ್ಟ್ರಗಳು ಹಿಟ್ಲರನ ನೂತನ ವ್ಯವಸ್ಥೆಗೆ ಸೇರುವುದಿಲ್ಲವೆಂದು ತಿಳಿದುದರಿಂದ ಜರ್ಮನರ ರಾಜನೀತಿಗುಂಟಾದ ಸೋಲನ್ನು ಮುಚ್ಚುವುದಕ್ಕಾಗಿ ಬರ್ಲಿನ್ ಆಕಾಶವಾಣಿಯು ಬಹಳ ಮಟ್ಟಿಗೆ ಪ್ರಯತ್ನಪಡುತ್ತಿದೆ. "ತ್ರಿರಾಷ್ಟ್ರಗಳ ಒಪ್ಪಂದದಿಂದ, ಅವಗಳೊಡನೆ ಇತರ ರಾಷ್ಟ್ರಗಳೂ ಸಹ ಸಹಕರಿಸಲು ಅನುಕೂಲವಾಗಿವೆ" ಎಂಬುದಾಗಿ ನವೆಂಬರ್ 26ರಲ್ಲಿ ಹ್ಯಾಂಬರ್ಗರ್ ಫೆಮ್‌ಡನ್‌ಬ್ಲಾಟ್ ಪತ್ರಿಕೆಯು ತಿಳಿಸಿತು. ಹಾಗಾಗಿದ್ದರೆ ಅವು ಯಾವದೇಶಗಳೆಂದು ಸ್ಪಷ್ಟವಾಗಿ ಏಕೆ ಇನ್ನೂ ತಿಳಿಸಿಲ್ಲ? ಇಲ್ಲಿಯವರೆಗೂ, ರುಮೇನಿಯಾ, ಸ್ಲೊವಾಕಿಯೂ, ಮತ್ತು ಹಂಗರಿ, ಈ ಮೂರು ದೇಶಗಳು ಮಾತ್ರ ನಾಜಿಗಳ ಒತ್ತಾಯಕ್ಕೆ ಸೋತಿವೆ. ಇವು ಬೇರೆ ಯಾವ ಮಾರ್ಗವನ್ನೂ ತೆಗೆದುಕೊಳ್ಳುತ್ತವೆಂದು ಯಾರೂ ನಿರೀಕ್ಷಿಸಿರಲಿಲ್ಲ.

ಅದೇ ವಿಚಾರವಾಗಿ ಬರ್ಲಿನ್ ರೇಡಿಯೋವು ಬ್ರಿಟಿಷರು ಬಲ್ಗೇರಿಯಾದ ಸೈನ್ಯಗಳನ್ನು ಗ್ರೀಕ್ ಮತ್ತು ಟರ್ಕಿಯ ನರಹತ್ತಿಗೆ ರವಾನಿಸಿದೆಯೆಂದು ಹರಡಿದ ಭಯಸೂಚಕವಾದ ಸಮಾಚಾರವು ಸುಳ್ಳೆಂದು ಬಲ್ಗೇರಿಯಾದಿಂದ ಬಂದಿರುವ ವರ್ತಮಾನವು ಸಮಾಧಾನವನ್ನುಂಟುಮಾಡಿದೆ ಎಂದು ತಿಳಿಸುತ್ತದೆ.

ಬ್ರಿಟಿಷರಿಂದ ಅಂತಹ ಸಮಾಚಾರವಾವುದೂ ಹೊರಡಲಿಲ್ಲ. ಆದರೆ ಕಳೆದವಾರ ಬಲ್ಗೇರಿಯ ರಾಜನೀತಜ್ಞರು ಆಕ್ಸಿಸ್ ಧ್ವಜದಡಿ ತಮ್ಮ ದೇಶವನ್ನೂ ನಿಲ್ಲಿಸುವುದಕ್ಕಾಗಿ ಬರ್ಲಿನಿಗೆ ಬರುತ್ತಿದ್ದಾರೆಂದು ಬರ್ಲಿನ್ ಸಮಾಚಾರವೊಂದು ತಿಳಿಸಿತು. ಆ ವಾರ್ತೆಯನ್ನು ಬಲ್ಗೇರಿಯಾವು ಸುಳ್ಳೆಂದು ತಿಳಿಸಲೂ ಇಲ್ಲ.

ರುಮೇನಿಯಾದ ವಿಚಾರದಲ್ಲಿ ಮಾತನಾಡುತ್ತಾ, ನಾಜಿ ರೇಡಿಯೋವು ಜನರಲ್ ಆಂಟೋನೆಸ್ಕುರವರು ಐರನ್‌ಗಾರ್ಡ್ ಮುಖಂಡನಾದ ಕಾಡ್ರೆನೂನ ಆಶಯಗಳನ್ನು ನೆರವೇರಿಸುವ

ರಾಗಿರುತ್ತಾರೆ ಎಂದು ತಿಳಿಸಿತು. ಆದರೆ ಈ ಜನರಲ್ಲನು ಹಿಂತಿರುಗುವ ವೇಳೆಗೆ ಐರನ್ ಗಾರ್ಡಿನವರು 64 ಮಂದಿ ಪ್ರಮುಖ ರಾಜಕೀಯ ಮುಂದಾಳುಗಳನ್ನು ಇಟ್ಟರು ಮಾಜಿ ಪ್ರಧಾನಮಂತ್ರಿಗಳನ್ನೂ ಕೊಲೆಮಾಡಿದ್ದರು. ಐರನ್‌ಗಾರ್ಡುಗಳ ಮುಖಂಡರಾದ ಎಂ. ಸಿಮಾರವರು ರುಮೇನಿಯಾ ಮಂತ್ರಿ ಮಂಡಳದ ಉಪ ಪ್ರಧಾನ ಮಂತ್ರಿಗಳಾಗಿರುತ್ತಾರೆ. ಕೊರೆ ಮಾಡಿದವರಮೇರೆ ಇನ್ನೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಹಿಟ್ಲರ್ ಮತ್ತು ಮುಸೋಲಿನಿಗಳಿಬ್ಬರೂ, ರುಮೇನಿಯಾದಲ್ಲಿ ಕೊಲೆಪಾತಕ ತನವನ್ನಾರಂಭಿಸಿದ ಕಾಡ್ರೆಯಾನನ ಶವದ ಸಂಸ್ಕಾರವನ್ನು ಪುನಃ ಏರ್ಪಡಿಸಿವ ಸಂದರ್ಭದಲ್ಲಿ ಪುಷ್ಪಮಾಲೆಗಳನ್ನು ಗೌರವಾರ್ಥವಾಗಿ ಕಳುಹಿಸಿದ್ದಿತು.

ಇತರರ ದೃಷ್ಟಿಯಿಂದ.

ಗ್ರೀಸಿನಲ್ಲಿ ಶತ್ರುಸೈನ್ಯವನ್ನು ಹಿಮ್ಮೆಟ್ಟಿಸಲಾಯಿತು ಎಂದು ಇಟಾಲಿಯ್ ಪ್ರಕಟಣೆಯು ತಿಳಿಸಿತು. ಜರ್ಮನ್ ರೇಡಿಯೋ ಆ ಪ್ರಕಟಣೆಯನ್ನೇ ಉಲ್ಲೇಖಿಸಿ ಇಟಾಲಿಯನರು ಪುನಃ ದಾಳಿಯನ್ನಾರಂಭಿಸಿದಾಗ ಗ್ರೀಕರಿಗೆ ಬಹಳ ನಷ್ಟವಾಯಿತು ಎಂದು ತಿಳಿಸಿತು. ಟರ್ಕಿಯ ಆಕಾಶವಾಣಿಯು, ಮಾಸ್ಕೋವಿನ ವೃತ್ತಪತ್ರಿಕೆಯಲ್ಲಿ ಸೂಚಿತವಾಗಿರುವ ವರದಿಯನ್ನು ಉಲ್ಲೇಖಿಸಿದೆ. ಪಾಸ್ಕೋವಿನ "ಕ್ರಾಸ್ನಾಯಾಸ್ವೆಯಸ್ತಾ" ಎಂಬ ಪತ್ರಿಕೆಯಲ್ಲಿ ರಷ್ಯದ ಸೈನ್ಯದ ಕರ್ನರ್ ಪೆಡ್ರಾಫ್‌ರವರು "ಇಟಾಲಿಯನರಿಗೂ, ಗ್ರೀಸರಿಗೂ ನಡೆಯುತ್ತಿರುವ ಯುದ್ಧದಲ್ಲಿ ಇಟಾಲಿಯನರಿಗೆ ಮೊದಲಿನಿಂದಲೂ ದೆನೆಯು ಚನ್ನಾಗಿಲ್ಲ. ಏಕೆಂದರೆ ಅವರು ಗ್ರೀಕರಮೇಲೆ ಮಿಂಚಿನಂತೆಹಾರಿ ಅವರನ್ನು ನುಂಗಿಬಿಡಬಹುದೆಂದು ಭಾವಿಸಿದ್ದರು. ಇದೇ ಇಟಲಿಯ ದೊಡ್ಡ ತಪ್ಪು. ಬ್ರಿಟಿಷ್ ವಿಮಾನ ದಳವು ಗ್ರೀಕರಿಗೆ ಬಹಳ ಹೆಚ್ಚಿನ ಸಹಾಯವನ್ನು ಮಾಡಿತು. ಇಟಾಲಿಯನರು ತಮ್ಮ ಆಯುಧ ಸಾಮಗ್ರಿಗಳನ್ನು ಗ್ರೀಕರ ಕೈಯಲ್ಲಿ ಬಿಟ್ಟು ಓಡಬೇಕಾಯಿತು. ಯುದ್ಧವು ಪ್ರಾರಂಭವಾದ ಮೂರನೇ ವಾರದವೇಳೆಗೆ ಅಲ್ಬೇನಿಯಾದಲ್ಲಿ ಇಟಲಿಯ ಸ್ಥಿತಿಯು ಚಿಂತಾಜನಕವಾಗಿತ್ತು. ನವೆಂಬರ್ 28ನೇ ತಾ॥ ಇಟಾಲಿಯನರು ಬಲವಾಗಿ ರಕ್ಷಿಸಲ್ಪಟ್ಟಿದ್ದ ಎರಡು ಬ್ರಿಟಿಷ್ ವ್ಯಾಪಾರದ ಹಡಗುಗಳನ್ನು ಕೆಂಪು ಸಮುದ್ರದಲ್ಲಿ ಮುಳುಗಿಸಿಬಿಟೆಂದು ಪ್ರಕಟಣೆಯನ್ನು ಹೊರಡಿಸಿದರು. ಕೆಂಪು ಸಮುದ್ರದಲ್ಲದ್ದ ಎರ್ಲಾ ಬ್ರಿಟಿಷ್ ಹಡಗುಗಳು ಸುರಕ್ಷಿತವಾಗಿವೆ ಎಂದು ಬ್ರಿಟಿಷ್ ಸರ್ಕಾರದವರ ಪ್ರಕಟಣೆಯು ತಿಳಿಸುತ್ತದೆ. ಇದರಿಂದ ಇಟಾಲಿಯ್ ವಾರ್ತೆಗಳು ಎಂತಹ ಸುಳ್ಳು ವಾರ್ತೆಗಳೆಂದು ತಿಳಿಯುತ್ತದೆ. ಇವರ ವಾರ್ತೆಗಳನ್ನು ನಂಬುವುದು ಜರ್ಮನರಿಗೆ ಅಪಾಯಕರವೆಂದೇ ಹೇಳಬೇಕು.

ಪ್ಲಿಮತ್.

ಜರ್ಮನ್ ಆಕಾಶವಾಣಿಯು ಲಂಡನ್ ನಗರವನ್ನು ನಾಶ ಮಾಡಿದೆವೆಂದು ಹೇಳುವಂತೆ ಪ್ಲಿಮತ್ ನಗರವನ್ನೂ ನಾಶಮಾಡಿದೆವೆಂದು ಹೇಳುತ್ತಾರೆ. ಪಶ್ಚಿಮ ತೀರದ ದೊಡ್ಡದಾದ ಮತ್ತು ಮುಖ್ಯವಾದ ಈ ತೀರ ಪಟ್ಟಣಕ್ಕೆ ಬಹಳ ನಷ್ಟವನ್ನುಂಟುಮಾಡಿರಾಯಿತು. 'ಗ್ರೇಟ್ ವೆಸ್ಟರನ್ ಡಾಕ್ಸ್' ಎಂದು ಈ ಬಂದರಿಗೆ ಹೆಸರಿರುವುದು ಅಲ್ಲಿಯ ರೈಲ್ವೆ ಕಂಪೆನಿಯವರಿಂದ. ಇಲ್ಲಿ ನೀರಿನ ಆಳವು ಕಡಿಮೆ. ಸಣ್ಣ ಸಣ್ಣ ಹಡಗುಗಳು ಮಾತ್ರ ಬರಬಲ್ಲವು. ಇಲ್ಲಿಗೆ ಸಾಮಾನ್ಯ ದರ್ಜೆಯ ಹಡಗುಗಳು ಸಹಾ ಬರುವಂತಿಲ್ಲ. ಆದುದರಿಂದ ಈ ಬಂದರು ಅಂತಹ ಮುಖ್ಯವಾದುದೆಂದು ಭಾವಿಸುವ ಹಾಗಿಲ್ಲ. ಆದರೆ ಈ ನಗರವು ಬಹಳ ಪ್ರಾಮುಖ್ಯವಾದುದೆಂದು ನಾಜಿಗಳೇನೋ ಹೊಗಳಿದ್ದೂ ಹೊಗಳಿದ್ದೆ. ಆದರೆ ಜರ್ಮನ್ ವಿಮಾನಗಳು ಈ ನಗರಕ್ಕೆ ಅಂತಹ ನಷ್ಟವನ್ನೇನೂ ಮಾಡಲು ಸಾಧ್ಯವಾಗದಿದ್ದ ವಿಷಯವನ್ನು ಮರೆಮಾಚಲು ಈ ಆಟವನ್ನು ಹೂಡಿರುವುದು. "ಆ ನಗರದಲ್ಲಿ ಸಕ್ಕರೆಯ ರಿಫೈನರಿಗಳೂ, ಗಾಜಿನ ಫರ್ನೇಸ್ಸೂ, ವುಡ್‌ಪ್ರೆಸಿಂಗು ಕೈಗಾರಿಕೆಯೂ, ಸಾಬೂನಿನ ಕಾರ್ಖಾನೆಯೂ ಇದೆ ಎಂಬುದಾಗಿ ಜರ್ಮನ್ ರೇಡಿಯೋವು ತಿಳಿಸುತ್ತದೆ. ಈ ನಗರದಲ್ಲಿ ಒಂದು ಸಕ್ಕರೆಯ ರಿಫೈನರಿ ಇದ್ದುದು ನಿಜ. ಆದರೆ ಬಹಳ ಹಿಂದೆಯೇ ಅದು ಆಕಾಶವಾಣಿಯ ಸ್ಟೇಷನ್ನಾಗಿ ಮಾರ್ಪಾಡಾಗಿದ್ದಿತು. ನಮ್ಮಕ್ಕೆ ಆ ಸ್ಟೇಷನ್ನು ಕೆಲಸ ಮಾಡುತ್ತಿಲ್ಲ. ಸ್ಥಳದ ವಿಾನು ಹಿಡಿಯುವರ ದೋಣಿಗಳಿಗೆ ಸ್ವಲ್ಪ ಸೇರ್ ಕ್ಲಾತನ್ನು ತಯಾರಿಸುತ್ತಿದ್ದುದೇನೋ ನಿಜ. ನಮ್ಮಕ್ಕೆ ಮಾನು ಹಿಡಿಯುವರ ದೋಣಿಗಳ ಸಂಖ್ಯೆ ಇಪ್ಪತ್ತರಿಂದ ನಲವತ್ತರವರೆಗಿರಬಹುದು. ಸುಮಾರು 500 ಮಂದಿ ಕೆಲಸ ಮಾಡುವ ಸಾಬೂನಿನ ಕಾರ್ಖಾನೆಯಿದೆ. ಸ್ಥಳದ ಅವಶ್ಯಕತೆಗಳಿಗೆ ಮರವನ್ನು ಆಮದುಮಾಡುತ್ತಿದೆ.

ಅವರಮಾತನ್ನೇ ಕೇಳಿ.

ನವೆಂಬರ್ 27ರಲ್ಲಿ ನಾಜಿ ರೇಡಿಯೋವು ಬ್ರಿಟಿಷ್ ವಿಮಾನದಳದವರು ಒಳ್ಳೆಯಗಾಳಿಯಿದ್ದಾಗ ಮಾತ್ರ ವಿಮಾನವನ್ನು ನಡೆಸಬಲ್ಲವರೆಂದು ಟೀಯಾಳಿಸಿತು. ಬ್ರಿಟಿಷ್ ವೈಮಾನಿಕರು ಎಷ್ಟೋಕಾಲ ವಿಮಾನದಲ್ಲಿ ಹಾರಾಡುವುದನ್ನೇ ಬಿಟ್ಟು ಬಿಡುತ್ತಾರೆಂದು ಸೂಚಿಸಿ, ಜರ್ಮನ್ ಬಾಂಬರುಗಳು ಎಂತಹ ಹನಾಕ್ಕಾದರೂ ಹೆದರದೆ ಶತ್ರುಗಳಿಗೆ ನಷ್ಟವನ್ನುಂಟುಮಾಡುತ್ತಿದ್ದಾರೆಂಬುದಾಗಿ ಸೂಚಿಸಿತು. ಆದರೆ ಮರುಗಳಿಗೆಯೇ ಜರ್ಮನ್ ಸೈನ್ಯ ಕೇಂದ್ರದ ಪ್ರಕಟಣೆಯೊಂದು, 'ಹವಾ ಚನ್ನಾಗಿಲ್ಲದ-ಪ್ರಯುಕ್ತ ಶತ್ರುರಾಜ್ಯದ ಮೇಲೆ ವಿಮಾನ ದಾಳಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ' ಎಂದು ತಿಳಿಸಿತು. ಜರ್ಮನ್ ವಿಮಾನಗಳು ದಾಳಿಮಾಡಿದ ಕೈಗಾರಿಕಾ ಕೇಂದ್ರಗಳೂ, ಸೈನ್ಯ ಕೇಂದ್ರಗಳ ಪ್ರಸ್ತಾಪವನ್ನು ವೃತ್ತಪತ್ರಿಕೆಗಳವರು ಮಾಡಕೂಡದೆಂದು ಬ್ರಿಟಿಷ್ ಸೆನ್ಸಾರ್ರವರು ವಿಧಿಸಿರುತ್ತಾರೆಂದು ಜರ್ಮನರ ಆಕ್ಷೇಪಣೆ. "ಜರ್ಮನ್ ಬಾಂಬುಗಳು ಬ್ರಿಟಿನ ಕೈಗಾರಿಕಾ ಮತ್ತು ಮಿಲಿಟರಿ ಕೇಂದ್ರಗಳ ಮೇಲೆ ರಾತ್ರಿಯವೇಳೆ ದಾಳಿಗಳನ್ನು ನಡೆಯಿಸಿ ಬಹಳ ನಷ್ಟವನ್ನುಂಟುಮಾಡಿರುತ್ತಾರೆ" ಎಂದು ಅಮೆರಿಕನ್ ವೃತ್ತಪತ್ರಿಕೊದ್ಯೋಗಿಯು ಕೊಟ್ಟಿರುವ ವರದಿಯನ್ನು ಉಲ್ಲೇಖಿಸಿತು.

ಬರಿಯ ಹರಟೆ.

ಬ್ರಿಟಿಷ್ ವರದಿಗಳು ಶುದ್ಧಸುಳ್ಳೆಂದು ಬರ್ಲಿನಿನಲ್ಲಿರುವ ವಿದೇಶದ ಪತ್ರಿಕಾ ಪ್ರತಿನಿಧಿಗಳಿಗೂ, ಮಿಲಿಟರಿ ಅಧಿಕಾರಿಗಳಿಗೂ ಭಾವನೆಯುಂಟಾಗುವಂತೆ ಮಾಡಲು ನಾಜಿಗಳು ಅವರು ಬ್ರಿಟಿಷ್ ವಿಮಾನದಾಳಿಗೀಡಾದ ಬರ್ಲಿನ್ ನಗರದಲ್ಲಿ ಅವರು ಸಂಚರಿಸಲು ಬಹಳ ಉಪಾಯವಾಗಿ ಒಂದು ಏರ್ಪಾಡನ್ನು ಮಾಡಿದ್ದರು. ಆರ್. ಎ. ಎಫ್. ನವರಿಂದ ಉಂಟಾದ ನಷ್ಟವೊಂದೂ ಕಂಡುಬರಲಿಲ್ಲ. ಎರಡು ದಿನಗಳನಂತರ ಅವರಿಗೆಲ್ಲಾ ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು. ಆ ದಿನ ಅವರನ್ನು "ಬ್ರಿಟಿಷ್ ಬಾಂಬರುಗಳಿಂದ ವಿಶೇಷ ಅಪಘಾತಕ್ಕೀಡಾಯಿತೆಂದು ನಂಬರಾಗಿದ್ದ" ರೈನ್‌ನದೀತೀರದ ಸುಂದರ ನಗರವಾದ ಕರೋನ್ ನಗರಕ್ಕೆ ಕರೆದುಕೊಂಡು ಹೋಗಿದ್ದರು.

ಬ್ರಿಟಿಷರು ತಾವು ಕರೋನ್ ನಗರವನ್ನು ನಷ್ಟಪಡಿಸಿದೆವೆಂದು ಯಾವಾಗಲೂ ಹೇಳಿಕೊಳ್ಳಲಿಲ್ಲ. ಅಲ್ಲದೆ ನಗರಗಳ

ಮೇಲೆ ಬ್ರಿಟಿಷರು ದಾಳಿ ನಡೆಯಿಸುವುದಿಲ್ಲವೆಂದೂ, ಬಂದರುಗಳು, ಯುದ್ಧ ಸಾಮಗ್ರಿಗಳ ಗಡಂಗುಗಳು, ಕಾರ್ಖಾನೆಗಳು ಇವುಗಳ ಮೇಲೆ ಮಾತ್ರ ಬಾಂಬುಗಳನ್ನು ಹಾಕುತ್ತಾರೆಂದು ಹಿಟ್ಲರನ ಅನುಯಾಯಿಗಳು ತಿಳಿಯಬೇಕು.

ಜರ್ಮನ್ ಯುದ್ಧ ಸಾಮಗ್ರಿಗಳ ತಯಾರಿಕೆಯು ಹಿಂದಿನಂತೆಯೇ ಇದೆ ಎಂದು ಒಂದು ವಿಮಾನದಲ್ಲಿ ಪ್ರಯಾಣ ಮಾಡುತ್ತಾ ಈ ಪತ್ರಿಕಾ ಪ್ರತಿನಿಧಿಗಳು ತಿಳಿದುಕೊಂಡರಂತೆ! ಆದರೆ ಆ ಪ್ರತಿನಿಧಿಗಳಾರೆಂಬುದು ಯಾರಿಗೂ ತಿಳಿದಿಲ್ಲ.

ವಿಮರ್ಶೆಯೇ ಬೇಕಾಗಿಲ್ಲ.

ಇಟಾಲಿಯನ್ ರೇಡಿಯೋರವರು ಅರಬ್ಬಿ ಭಾಷೆಯಲ್ಲಿ ನವೆಂಬರ್ 27ನೆಯ ತಾರೀಖಿನ ದಿನ "ಬಾಲ್ಕನ್ ಪರಿಸ್ಥಿತಿಯು ಇಟಲಿಗೆ ಬಹಳ ಸಮರ್ಪಕವಾಗಿದೆ." ಎಂದು ತಿಳಿಸಿದರು. ಅದೇ ದಿನ ಟರ್ಕಿ ರೇಡಿಯೋದವರು ಅರಬ್ಬಿ ಭಾಷೆಯಲ್ಲಿ "ಇಟಾಲಿಯನರು ಗ್ರೀಕರ ಮೇಲೆ ಉಪಯೋಗಿಸಲೆಂದು ಆಲ್ಬೇನಿಯನರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟರು. ಆದರೆ ಆಲ್ಬೇನಿಯನರು ಅವನ್ನು ಇಟಾಲಿಯನರ ಮೇಲೆ ಉಪಯೋಗಿಸಿರುತ್ತಾರೆ. ಎಣ್ಣೆಯ ಟ್ಯಾಂಕುಗಳಿಗೆ ಬೆಂಕಿ ಹಚ್ಚಿಸಿರುತ್ತಾರೆ ಆಲ್ಬೇನಿಯಾವು ಇಟಾಲಿಯನರಿಗೆ ಇಂದು ನರಕ ಸದೃಶವಾಗಿದೆ." ಎಂದು ತಿಳಿಸಿದರು.

ಆದರೆ 28ನೆಯ ತಾರೀಖಿನ ದಿನ ಇಟಾಲಿಯ್ ರೇಡಿಯೋವು, "ಆಲ್ಬೇನಿಯನರು ಇಟಲಿಗಾಗಿ ತಮ್ಮ ಪ್ರಾಣಗಳನ್ನಾದರೂ ಕೊಡಲು ಸಿದ್ಧರಾಗಿದ್ದಾರೆ" ಎಂದು ತಿಳಿಸಿತು.

ಜರ್ಮನರ ಅಪಪ್ರಚಾರ.

ಇಂಗ್ಲೆಂಡಿನ ಆಹಾರವಸ್ತುಗಳಿಗೆ ಅಭಾವವುಂಟಾಗಿದೆ ಎಂದೂ ಹಾಲಿಗೆ ಅಭಾವವೆಂದೂ ಜರ್ಮನ್ ರೇಡಿಯೋವು ನವೆಂಬರ್ 29ನೆಯ ತಾರೀಖಿನ ದಿನ ತಿಳಿಸಿತು. ವಾಸ್ತವಿಕವಾಗಿ ಹಾಲಿನ ಸೇವನೆಯನ್ನು ಸ್ವಲ್ಪವೂ ಪ್ರತಿಬಂಧಿಸಿರುವುದಿಲ್ಲ. ಜನರು ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಸೇವಿಸುತ್ತಿದ್ದುದಕ್ಕಿಂತ ಸೇಕಡ 14ರಷ್ಟು ಹೆಚ್ಚಾಗಿ ಹಾಲನ್ನು ಸೇವಿಸುತ್ತಿದ್ದಾರೆ. ಗರ್ಭಿಣಿಯರಿಗೂ, ಅಶಕ್ತರಿಗೂ, ಶಾಲೆಯ ವಿದ್ಯಾರ್ಥಿಗಳಿಗೂ, 5 ವರ್ಷಕ್ಕೆ ಕೆಳಗಿನ ಮಕ್ಕಳಿಗೂ, ಬಹಳ ಕಡಿಮೆಯ ದರದಲ್ಲಿ, ಅಥವಾ ಉಚಿತವಾಗಿ ಹಾಲನ್ನು ಸರಬರಾಯಿ ಮಾಡುವ ಸಾವಿರಾರು ಕೇಂದ್ರಗಳಿವೆ. ಮಾಂಸದ ಅಭಾವವೆಂದು ಜರ್ಮನರು ತಿಳಿಸುತ್ತಾರೆ. ಮಾಂಸದ ಸೇವನೆಯ ಪ್ರಮಾಣವನ್ನು ಆದರ ತೂಕದ ಮೇಲೆ ನಿರ್ಧರಿಸಿಲ್ಲ. ವಾರಕ್ಕೆ ಪ್ರತಿಯೊಬ್ಬನೂ 1 ಷಿಲಿಂಗು 10 ಪೆನ್ನಿಗಳಷ್ಟು ಬೆಲೆ ಬಾಳುವ ಮಾಂಸವನ್ನು ಸೇವಿಸಲು ಅವಕಾಶವನ್ನು ಕೊಟ್ಟಿದೆ. ಇದು ಹೆಚ್ಚು ಕಡಿಮೆಯುದ್ಧ ಪ್ರಾರಂಭವಾಗುವುದಕ್ಕೆ ಮೊದಲು ಜನರು ಸೇವಿಸುತ್ತಿದ್ದ ನರಾನರಿ ಪ್ರಮಾಣದಷ್ಟೇ ಇದೆ.

ಆದರೆ ಜರ್ಮನರ ಗತಿಯನ್ನು ನೋಡಿ, ನವೆಂಬರ್ 15ನೆಯ ತಾರೀಖಿನ ದಿನ ನಾಜಿ ಸರ್ಕಾರದವರು ಡಿಸೆಂಬರ್ 1ನೆಯ ತಾರೀಖಿನ ರಾಗಾಯಿತು ನಾಯಿಯ ಮಾಂಸವನ್ನು ಜನರು ಸೇವಿಸಬಹುದೆಂದು ಆಜ್ಞೆ ಮಾಡಿದರು. ನಾಜಿ ಅಧಿಕಾರಿಗಳು ಬೀದಿಯಿಂದ ಬೀದಿಗೆ ಹೋಗಿ ಜರ್ಮನರ ವಿಚಿತ್ರವಾದ ಆಹಾರವಸ್ತುಗಳ ಪಟ್ಟಿಗೆ ಹೊಸದಾಗಿ ಸೇರಿಸಿದ ಈ ಮಾಂಸವನ್ನು ಪರೀಕ್ಷಿಸಿದ್ದಾರೆ. ನಾಯಿಯ ಮಾಂಸದಲ್ಲಿ ಗೋ ಮಾಂಸದಲ್ಲಿರುವಷ್ಟೇ ಗುಣವಿದೆಯೆಂದು ಜರ್ಮನರಿಗೆ ತಿಳಿದುಬಂದಿದೆ.

ಹಳೆಯ ಕತೆ.

ವಿಮಾನ ದಾಳಿಗೀಡಾದ ಪ್ರದೇಶಗಳಲ್ಲಿ ಕೆಲವು ಕಾಲಗಳಲ್ಲಿ ಮಾತ್ರ ವರದೇಶದ ಪತ್ರಿಕಾ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗುವ ಪದ್ಧತಿಯನ್ನು ಇಟಾಲಿಯನರೂ ಸಹ ಪ್ರಾರಂಭಿಸಿರುತ್ತಾರೆ. ಸಾರ್ಡಿನಿಯಾದಲ್ಲಿ ನಡೆದ ನೌಕಾ ಯುದ್ಧದಲ್ಲಿ ಭಾಗವಹಿಸಿದ ಹಡಗುಗಳನ್ನು ಡಿಸೆಂಬರ್ 21ನೆಯ ತಾರೀಖಿನ ದಿನ ಇಟಲಿಯವರು ತೋರಿಸಿದರಂತೆ. ಮತ್ತು ಆ ಪ್ರತಿನಿಧಿಗಳು ಇಟಾಲಿಯನರ ವರದಿಯನ್ನು ಅನುಮೋದಿಸಿದರಂತೆ. (1) ಆ ಪ್ರತಿನಿಧಿಗಳ ಹೆಸರುಗಳನ್ನು ನೂಚಿಸಿಲ್ಲ; (2) ಅವರು ಯಾವ ಪತ್ರಿಕೆಗಳ ಪ್ರತಿನಿಧಿಗಳೆಂಬುದೂ ತಿಳಿದಿಲ್ಲ; (3) ಯಾವ ಯಾವ ಹಡುಗಳು ಯುದ್ಧದಲ್ಲಿ ಭಾಗವಹಿಸಿದುವೆಂಬುದನ್ನು ಇಟಾಲಿಯನರು ಬಹಳ ಬುದ್ಧಿವಂತಿಕೆಯಿಂದ ಮರೆಮಾಚಿದ್ದಾರೆ. ಬ್ರಿಟಿಷರಾದರೋ ಯುದ್ಧದಲ್ಲಿ ಭಾಗವಹಿಸಿದ ಹಡಗುಗಳ ಹೆಸರುಗಳನ್ನು ತಿಳಿಸಿರುತ್ತಾರೆ; (4) ಆದುದರಿಂದ ಇಟಾಲಿಯನರು ಯುದ್ಧದಲ್ಲಿ ಭಾಗವಹಿಸಿದ ಅಥವಾ ವಹಿಸಿ ಹೆಚ್ಚಾಗದಿದ್ದ ಕೆಲವು ನೌಕೆಗಳನ್ನು ತೋರಿಸಿದ್ದರೂ ತೋರಿಸಿರಬಹುದು. ಪ್ರಾರಂಭೋದ್ದಲ್ಲಿ ತಮ್ಮ ನೌಕಾದಳಕ್ಕೆ ಸ್ವಲ್ಪವೂ ಅಪಾಯವಾಗಲಿಲ್ಲವೆಂದು ಇಟಾಲಿಯನರು ತಿಳಿಸಿದುದು ನೆನಪಿರಬಹುದು. ಅನಂತರ ಬ್ರಿಟಿಷರು ಅಪಾಯಕ್ಕೀಡಾದ ಇಟಾಲಿಯನ್ ನೌಕಾದಳಗಳ ಭಾವಚಿತ್ರಗಳನ್ನು ಪ್ರದರ್ಶಿಸಿ ಇಟಾಲಿಯನರಿಗಾದ ನಷ್ಟವನ್ನು ಸಮರ್ಥಿಸಿದರು. ಜರ್ಮನರ ಫ್ರಾಂಕ ಫರ್ಟರ್ ಸಿಟುಂಗ ಪತ್ರಿಕೆಯೂ ಸಹ ಇದನ್ನೊಪ್ಪಿಕೊಂಡಿತು. "ಕೆಲವು ತುಂಟ ಬ್ರಿಟಿಷ್ ವೈಮಾನಿಕರು ಇಟಾಲಿಯನ್ ಯುದ್ಧ ನೌಕೆಗಳನ್ನು ಚಾರ್ಪೆಡೊಮಾಡಿ ಇನ್ನೂ ಎಳೆಯುದಾದ ನೌಕಾದಳಕ್ಕೆ ಅಪಾಯವನ್ನುಂಟುಮಾಡಿದರು. ಈ ನಷ್ಟವನ್ನು ಬಹುಕಾಲ ಮರೆಯುವಂತಿಲ್ಲ" ಎಂದು ಬರೆದಿದೆ.

ಅವರೇ ನಿರ್ಧರಿಸಲಿ.

ಜರ್ಮನ್ ವಿಮಾನದಾಳಿಯಿಂದ ಇಂಗ್ಲೆಂಡಿಗೆ ಎಂತಹ ಅಪಾಯವಾಗಿದೆ ಎಂದು ತಾಟಸ್ಥ್ಯ ರಾಷ್ಟ್ರಗಳ ವೃತ್ತ ಪತ್ರಿಕೆಗಳವರ ಪ್ರಕಟಣೆಗಳನ್ನು ಜರ್ಮನರು ಆಗಿಂದಾಗ್ಗೆ ಉಲ್ಲೇಖಿಸುತ್ತಾರೆ. ಡಿಸೆಂಬರ್ 1ನೆಯ ತಾರೀಖಿನ ದಿನ, ಎ.ಬಿ.ಸಿ. ಎಂಬ ಸ್ಪಾನಿಷ್ ಪತ್ರಿಕೆಯ ಲಂಡನಿನ ಪ್ರತಿನಿಧಿಯು ಬರ್ಮಿಂಗ್‌ಹ್ಯಾಮಿಗೆ ವಿಮಾನ ದಾಳಿಯಿಂದ ಬಹಳ ನಷ್ಟವಾಗಿದೆ ಎಂದು ಕಳುಹಿಸಿದ ವಾರ್ತೆಯನ್ನು ಜರ್ಮನರೂ ಉಲ್ಲೇಖಿಸಿದರು. ಆದರೆ ತಾಟಸ್ಥ್ಯರಾಷ್ಟ್ರಗಳ ಪ್ರತಿನಿಧಿಗಳು ಈ ವರ್ತಮಾನಗಳನ್ನು ಹೇಗೆ ಕಳುಹಿಸುತ್ತಾರೋ ಅದೇ ಆಶ್ಚರ್ಯ. ಇಂಗ್ಲೆಂಡಿನಲ್ಲಿ ಯುದ್ಧವಾರ್ತೆಗಳ ಮೇಲೆ ಬಹಳ ಉತ್ತಮವಾದ ಹತೋಟಿಯನ್ನಿಡಲು (ಸೆನ್ಸಾರ್‌ಷಿಪ್) ತಕ್ಕ ಏರ್ಪಾಡನ್ನು ಮಾಡಿದೆ. ಇಂಗ್ಲೆಂಡಿನ ವಾರ್ತೆಗಳನ್ನು ಸೆನ್ಸಾರ್ಪರು ತಡೆದು ಬಿಡುತ್ತಾರೆಂದು ಜರ್ಮನರೇ ಹಲವು ಬಾರಿ ಆಕ್ಷೇಪಿಸಿರುತ್ತಾರೆ. ಇಲ್ಲವೇ ನಾಜಿಗಳಿಗೆ ಬರುವ ವಾರ್ತೆಗಳು ಸುಳ್ಳಾಗಿರಬೇಕು. ಅಥವಾ ಇಂಗ್ಲೆಂಡಿನಲ್ಲಿ ಸೆನ್ಸಾರ್‌ಷಿಪ್ ಏರ್ಪಾಡೇ ಇಲ್ಲದಿರಬೇಕು. ನಾಜಿಗಳು ತಮಗೆ ಯಾವವಾರ್ತೆಯು ಬೇಕೋ ಅದನ್ನೇ ನಂಬಿಕೊಳ್ಳಬಹುದು. ಬೇಡವೆನ್ನುವರು ಯಾರು.

ಮೈಸೂರು ಸೈನ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರಗಳ ಸರಬರಾಯಿ

ವಿಕರ್ಸ್ ಮೆಷಿನ್‌ಗನ್ನುಗಳ ಸರಬರಾಯಿ.

ಧಾರಣೀಯ ಸೈನ್ಯದಳಗಳನ್ನು ಆಧುನಿಕ ರೀತಿಯಲ್ಲಿ ಸುಸಜ್ಜಿತವನ್ನಾಗಿ ಮಾಡಿರುವುದರಿಂದ ಮೈಸೂರು ಸರ್ಕಾರದವರಿಗೆ ಸುಮಾರು 150 ಕುದುರೆಗಳನ್ನು ಮೈಸೂರು ಫರ್ಜಿಯ ದಳದವರ ಉಪಯೋಗಕ್ಕಾಗಿ ಕೊಟ್ಟಿರುತ್ತಾರೆ. ಅಲ್ಲದೆ ಮೈಸೂರು ಫರ್ಜಿಯ ದಳದ ಮತ್ತು ಮೈಸೂರು ಪದಾತಿ ದಳದ ಮೊದಲನೇ ಬೇಟಾಲಯನಿನ ಯೋಧರೆಲ್ಲರಿಗೂ, ನಾಲ್ಕು ನಾಲ್ಕು ವಿಕರ್ಸ್ ಮೆಷಿನಗನ್ನುಗಳನ್ನು ಕೊಟ್ಟಿದೆ. ಇದಲ್ಲದೆ ಮೈಸೂರು ಪದಾತಿ ಸೈನ್ಯಕ್ಕೆ 12 ಲೂಯಿ ಗನ್ನುಗಳನ್ನೊದಗಿಸಿದೆ. 14 ಗನ್ನುಗಳನ್ನು ಕೊಡಲು ಅನುಮತಿಯಿದೆ. ಈ ದಳಕ್ಕೆ ಅನುಮತಿಯು ದೊರೆತಿರುವಷ್ಟರಮಟ್ಟಿಗೂ ಶಸ್ತ್ರಾಸ್ತ್ರಗಳನ್ನೊದಗಿಸುವ ವಿಷಯವನ್ನು ಪರ್ಯಾಲೋಚಿಸುತ್ತಿದೆ.

ಅಶ್ವದಳ ಮತ್ತು ಪದಾತಿದಳದ ಹಲವು ಅಧಿಕಾರಿಗಳು ವಂಸ್ಥಾನದಲ್ಲಿಯೂ ಇತರ ಪ್ರದೇಶಗಳಲ್ಲಿಯೂ ಶಿಕ್ಷಣವನ್ನು ಪಡೆದರು. ಸೈನ್ಯದ ಕೇಂದ್ರ ಕಚೇರಿಯಿಂದ ಆಗಿಂದಾಗ್ಗೆ ಬರುತ್ತಿದ್ದ ಟ್ರೇನಿಂಗು ಮ್ಯಾನ್ಯುಯಲ್, ಟ್ರೇನಿಂಗು ಮೆಮೊರಾಂಡಮು ಗಳಿಗನುಸಾರವಾಗಿ ಸೈನಿಕರಿಗೆ ವೈಯುಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಬ್ಲಾಕ್ ಪ್ರೋಗ್ರಾಮಿನ ಮೇರೆಗೆ ಶಿಕ್ಷಣವನ್ನು ಕೊಡಲಾಯಿತು. ಮೈಸೂರು ಸೈನ್ಯದ ಸಿಗ್ನಲರುಗಳು ಬಹಳ ಮೇಲುದರ್ಜೆಯವರಾಗಿರುತ್ತಾರೆಂದು ತಿಳಿಸಲು ಹರ್ಷವಾಗುತ್ತದೆ. ಸೈನ್ಯದ ಶಿಸ್ತು ಚನ್ನಾಗಿದ್ದಿತು. ಪ್ರಸಕ್ತ ವರ್ಷದಲ್ಲಿ ಸೈನ್ಯದ ನಿಯಮೋಲ್ಲಂಘನೆಗಾಗಿ ಶಿಕ್ಷೆಯನ್ನು ವಿಧಿಸಿದ ಸಂದರ್ಭವೇ ಇರಲಿಲ್ಲ.

"ಸೈನ್ಯದ" ಬಾಬಿಗೆ ಪ್ರಸಕ್ತ ವರ್ಷದಲ್ಲಿ 16,19,720 ರೂಪಾಯಿಗಳು ವೆಚ್ಚವಾಯಿತು. ಹಿಂದಿನ ವರ್ಷ 15,66,788 ರೂಪಾಯಿಗಳು ವೆಚ್ಚವಾಗಿದ್ದುವು.

ತುಮಕೂರಿನಲ್ಲಿ ಪ್ರಚಾರ ವಿಷಯಗಳ ಘೋಷಣೆ ಮತ್ತು ರೌಡ್ ಸ್ಪೀಕರುಗಳ ಉಪಯೋಗ.

ತುಮಕೂರು ನಗರದಲ್ಲಿ ಮನಸ್ವಿಯಾಗಿ ಘೋಷಣೆ ಮಾಡುವುದು, ರೌಡ್ ಸ್ಪೀಕರುಗಳ ಮೂಲಕ ಮನಸ್ವಿಯಾಗಿ ಕೂಗುವುದು ಇವುಗಳನ್ನು ತಪ್ಪಿಸಲು ಪೋಲೀಸಿನವರಿಗೆ ತಕ್ಕ ಅಧಿಕಾರವನ್ನು ಕೊಡುವುದಕ್ಕಾಗಿ ತುಮಕೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರವರು ಮೈಸೂರು ಪೋಲೀಸು ಆಕ್ಟಿನ 56 (H)ನೇ ಪ್ರಕರಣದ ಮೇರೆಗೆ ಒಂದು ಆಜ್ಞೆಯನ್ನು ಹೊರಡಿಸಿದ ಸಂಬಂಧದಲ್ಲಿ ಕೆಲವರು ಹಲವು ಟೀಕೆಗಳನ್ನು ಮಾಡಿರುತ್ತಾರೆ. ಈ ಟೀಕೆಗಳನ್ನು ಮಾಡಿರುವವರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ತೋರುತ್ತದೆ. ಅವರು ಈ ಕಾನೂನಿನ ವ್ಯಾಪ್ತಿಯನ್ನೂ, ಈ ಆಜ್ಞೆಯ ವ್ಯಾಪ್ತಿಯನ್ನೂ ಸಹ ತಪ್ಪಾಗಿ ಅರ್ಥಮಾಡಿಕೊಂಡಿರುವುದೇ ಈ ಟೀಕೆಗೆ ಕಾರಣವಾಗಿರುತ್ತದೆ. ಮನಸ್ವಿಯಾಗಿ ರೌಡ್ ಸ್ಪೀಕರನ್ನು ಉಪಯೋಗಿಸಿ ನಗರ ನಿವಾಸಿಗಳಿಗೂ, ರಸ್ತೆಗಳಲ್ಲಿ ಸಂಚರಿಸುವವರಿಗೂ ಮನಸ್ಸಿಗೆ ಬೇಜಾರಾಗುವ ರೀತಿಯಲ್ಲಿ ವರ್ತಿಸದಂತೆ ಪ್ರತಿಬಂಧಿಸಲು ಮಾತ್ರ ಈ ಕಾನೂನನ್ನು ಉಪಯೋಗಿಸಲಾಗುತ್ತದೆ. ರೌಡ್ ಸ್ಪೀಕರುಗಳು ಮುಂತಾದುವುಗಳ ಉಪಯೋಗವನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂಬ ಉದ್ದೇಶವೂ ಈ ಆಜ್ಞೆಯಲ್ಲಿ ಎಲ್ಲಿಯೂ ಸೂಚಿತವಾಗಿಲ್ಲ.

ವಾಸ್ತವಿಕವಾಗಿ ಸಾರ್ವಜನಿಕರು ಈ ಆಜ್ಞೆಯ ವ್ಯಾಪ್ತಿಯನ್ನು ಸರಿಯಾಗಿಯೇ ಗ್ರಹಿಸಿರುತ್ತಾರೆ. ಈ ಆಜ್ಞೆಯಿಂದ ತಮ್ಮ ನಾಗರಿಕ ಹಕ್ಕುಗಳಿಗೆ ಯಾವ ಪ್ರತಿಬಂಧಕವೂ ಉಂಟಾಗಿದೆ ಎಂದು ಅವರು ಭಾವಿಸಿರುವುದಿಲ್ಲ. ಇದಕ್ಕೆ ಬದಲಾಗಿ ಈ ಆಜ್ಞೆಯನ್ನು ಅವರು ಸ್ವಾಗತಿಸಿರುತ್ತಾರೆ. ಮತ್ತು 13ನೇ ತಾರೀಖಿನ ದಿನ ತುಮಕೂರಿನಲ್ಲಿ ನಡೆದ ಪೌರಸಭಾ ಚುನಾವಣೆಯ ಸಂಬಂಧದಲ್ಲಿ ಅನವಶ್ಯಕವಾದ ಉದ್ರೇಕ ಮತ್ತು ಕೋಪತಾಪಗಳನ್ನು ಈ ಆಜ್ಞೆಯಿಂದ ತಡೆಯಲು ಸಾಧ್ಯವಾಯಿತು. ಚುನಾವಣೆಯು ಶಿಸ್ತಿನಿಂದಲೂ ಸುಗಮವಾಗಿಯೂ ನಡೆಯಿತು. ಚುನಾವಣೆಗೆ ಮೂರು ದಿನಗಳ ಹಿಂದಿನಿಂದಲೂ, ಬೀದಿಯಲ್ಲಿ ರೌಡ್ ಸ್ಪೀಕರ್ ವ್ಯಾನುಗಳು ಓಡಾಡುತ್ತಿರುವುದೂ ಅಲ್ಲದೆ, ಜನರು ಗುಂಪಾಗಿ ಹಾಡುಗಳನ್ನು ಹೇಳಿಕೊಂಡು ಹೋಗುತ್ತಾ, ಸಾರ್ವಜನಿಕರಿಗೆ ಈ ಗರಾಜಿಯು ಒಂದು 'ನ್ಯೂಯಿರ್ಸೆನ್ಸ್' ಆಗಿಬಿಟ್ಟಿದ್ದಿತು. ಅಲ್ಲದೆ, ಇದರಿಂದ ತಮಗೆ ತೊಂದರೆಯಾಗುತ್ತದೆ ಎಂದು ಹಲವರು ಅಧಿಕಾರಿಗಳಲ್ಲಿ ಹೇಳಿಕೊಂಡಿರುತ್ತಾರೆ. ಇವರ ಆಕ್ಷೇಪಣೆಗಳು ಸರಿಯಾದುವೆಂದು ಅಧಿಕಾರಗಳಿಗೆ ತೋರಿಬಂದಿತು. ಮತ್ತು ತುಮಕೂರಿನ ನಾಗರಿಕರಿಗೆ ಈ ಸಂಬಂಧದಲ್ಲಿ ತಕ್ಕ ಪರಿಹಾರವನ್ನು ಕೂಡಲೇ ಕೊಡಬೇಕಾದುದು ಯುಕ್ತವೆಂದು ಅವರಿಗೆ ಖಂಡಿತವಾದ ರೀತಿಯಲ್ಲಿ ಕಂಡುಬಂದಿತು.

ಈ ಬಗೆಯ ಕಾನೂನುಗಳನ್ನು ಸಾದರುಮಾಡುವಾಗ ಬಹಳ ಎಚ್ಚರಿಕೆಯಿಂದ ಎಲ್ಲ ವಿಷಯಗಳನ್ನೂ ಪರಿಶೀಲಿಸಲಾಗುವುದು. ಸಾಮಾನ್ಯವಾಗಿ ಪ್ರಾಸಿಕ್ಯೂಷ್ಯ ಕ್ರಮಗಳನ್ನು ಜರುಗಿಸುವುದಿಲ್ಲ. ಕೇವಲ ವಿಶೇಷ ರೀತಿಯ ಸಂದರ್ಭಗಳಲ್ಲಿ, ಪ್ರಜೆಗಳಿಗಾಗುವ ತೊಂದರೆಯನ್ನು ಇನ್ನಾವ ವಿಧಾನದಲ್ಲಿಯೂ ನಿವಾರಿಸಲು ಸಾಧ್ಯವಿಲ್ಲದಿದ್ದಾಗ ಮಾತ್ರ, ಪ್ರಾಸಿಕ್ಯೂಷ್ಯ ಕ್ರಮಗಳನ್ನು ಜಾರಿಗೆ ತರಬೇಕಾಗುತ್ತದೆ.

ಜಾಯಿಂಟು ಸ್ಟಾಕು ಕಂಪೆನಿಗಳು.

ತಃಖ್ತೆ I.

(1) ಷೇರುಗಳಿಂದ ಪರಿಮಿತವಾದ ಕಂಪೆನಿಗಳು.

I. 1940ನೇ ಇಸವಿ ನವೆಂಬರಿನಲ್ಲಿ ರಿಜಿಸ್ಟರಾದ ಡಾಸ್ಕಾ ಕಂಪೆನಿಗಳ ತಃಖ್ತೆ.

ನಂ.	ಹೆಸರು ಮತ್ತು ತರಗತಿ	ಏಜೆಂಟರ, ಕಾರ್ಯದರ್ಶಿಗಳವರ ಆಫೀಸಿನ ವಿಳಾಸ.	ಉದ್ದೇಶ	ಬಂಡವಾಳ		
				ಅಧಿಕೃತ	ಸದ್ ಸ್ಕ್ರಿಪ್ಶನು	ಪೇಡ್ ಆಫ್
1	III. ಟ್ರೇಡ್ ಮತ್ತು ಮ್ಯಾನು ಫ್ಯಾಕ್ಚರಿಂಗ್.— (ಅ) ಸೋಪು ಮೇಣದ ಬತ್ತಿ ಇತ್ಯಾದಿ.					
	*1. ಯಶವಂತ ಸೋಪ್ ಮತ್ತು ಕೆಮಿಕಲ್ಸ್ ಲಿಮಿಟೆಡ್	ಡೈರೆಕ್ಟರ್— ಮಿ| ಸಿ. ವಾಸುದೇವರಾವ್ ... ರಿಜಿಸ್ಟ್ರೇಷನ್ ಆಫೀಸು— 52, IV ಕ್ರಾಸು ರೋಡು, ಬನಶಂಕರಿ ಪೋಸ್ಟು.	ಸಾಬೂನುಗಳ, ಕೆಮಿಕಲುಗಳ ಮತ್ತು ಸುಗಂಧ ದ್ರವ್ಯಗಳ ತಯಾರಿ ಮತ್ತು ವ್ಯಾಪಾರ.	20,000	4,000	4,000
2	IV. ಮಿಲ್ಲುಗಳು ಮತ್ತು ಪ್ರೆಸ್ಸುಗಳು—					
	2. ಚಿತ್ರದುರ್ಗ ಆಯಿಲ್ ಮತ್ತು ಇಂಡಸ್ಟ್ರಿಯಲ್ ಕಂಪೆನಿ, ಲಿ.	ಮ್ಯಾನೇಜಿಂಗ್ ಏಜೆಂಟರು— ಮೆಸರ್ಸ್ ಜಯ್‌ದಾಸ್ ಮತ್ತು ಕಂಪೆನಿ. ಆಫೀಸು— ಪಿರ್ಕಾ ಬೋರ್ಡು ಕಟ್ಟಡ, ಚಿತ್ರದುರ್ಗ	ನನ್ಯನಂಬಂಧವಾದ ಎಣ್ಣೆಗಳ ತಯಾರಿ ಮತ್ತು ವ್ಯಾಪಾರ.	2,00,000	9,400	1,880
			ಒಟ್ಟು ..	2,20,000	13,400	5,880

* ಖಾಸಗೀ ಕಂಪೆನಿ.

(2) ಲಾಭಸಂಪಾದನೆಗಾಗಿ ಅಲ್ಲದೆ ಗ್ಯಾರಂಟಿಯಿಂದ ಪರಿಮಿತವಾದ ಕಂಪೆನಿಗಳು—ಇಲ್ಲ.

ಈ ತಿಂಗಳಿನಲ್ಲಿ ಯಾವ ಕಂಪೆನಿಯೂ ಲಿಕ್ವಿಡೇಟು ಆಗಲಿಲ್ಲ.

ತಃಖ್ತೆ I (a)

ಮೈಸೂರು ಸಂಸ್ಥಾನದಿಂದ ಹೊರಗೆ ಸ್ಥಾಪಿತವಾಗಿ, ಸಂಸ್ಥಾನದಲ್ಲಿ ವ್ಯಾಪಾರ ಮಾಡುವ ಯಾವ ಸಂಸ್ಥೆಯೂ ಸೆಪ್ಟೆಂಬರ್ ತಿಂಗಳಿನಲ್ಲಿ ಮೈಸೂರು ಕಂಪೆನಿಗಳ ಆಕ್ಟಿನ 277 (1)ನೇ ಮೇರೆಗೆ ಅರ್ಜಿಗಳನ್ನು ದಾಖಲು ಮಾಡಲಿಲ್ಲ.

ಸಂಸ್ಥಾನದ ಕೈಗಾರಿಕೆ ಮತ್ತು ವಾಣಿಜ್ಯ ವಿಷಯಗಳಲ್ಲಿ ಜನರಿಗೆ ಬೇಕಾದ ವಿವರಗಳನ್ನೊದಗಿಸುವುದು.

ಕೈಗಾರಿಕೆ ಮತ್ತು ವಾಣಿಜ್ಯ ವಿಷಯಗಳ ಸಂಬಂಧದಲ್ಲಿ ಕೆಲವು ವಿವರಗಳನ್ನು ತಿಳಿಯಲು 1940ನೇ ಇಸವಿ ನವೆಂಬರ್ ತಿಂಗಳಿನಲ್ಲಿ 62 ಅರ್ಜಿಗಳು ಬಂದುದಕ್ಕೆ ಇದೇ ಇಸವಿ ಹಿಂದಿನ ತಿಂಗಳಿನಲ್ಲಿ 55 ಅರ್ಜಿಗಳು ಬಂದಿದ್ದುವು. ಸಂಸ್ಥಾನದ ಮತ್ತು ಸಂಸ್ಥಾನದ ಹೊರಗಿನ ಪ್ರದೇಶಗಳಲ್ಲಿರುವ ಕೆಲವು ವಾಣಿಜ್ಯ ಸಂಸ್ಥೆಗಳಿಗೆ ಈ ವಿವರಗಳು ಬೇಕಾಗಿದ್ದುವು. ಈ ಸಂಸ್ಥೆಗಳು ಕೇಳಿದ ವಿಷಯಗಳನ್ನೆಲ್ಲಾ ಆಯಾ ಪ್ರಾಂತ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರ ಮೂಲಕ ಒದಗಿಸಿದುದೂ ಅಲ್ಲದೆ, ಹೊರಗಿನವರಿಗೆ, ಸ್ಥಳದಲ್ಲಿ ಮೇರೆ ಹೇಳಿದ ಸಾಮಾನುಗಳನ್ನು ಮಾರಾಟಮಾಡುವ ವರ್ತಕರ ಪರಿಚಯವನ್ನೂ ಸಹ ಮಾಡಿಕೊಡಲಾಯಿತು.

ಈ ತಿಂಗಳಿನಲ್ಲಿ ಈ ಕೆಳಗೆ ಕಂಡ ವಿಷಯಗಳನ್ನು ತಿಳಿದು ಕೊಳ್ಳಲು ಪತ್ರಗಳು ಬಂದಿದ್ದುವು :—

(a) ಕೈಗಾರಿಕೆಗೆ ಸಂಬಂಧಪಟ್ಟುವು.—

1. ವಲ್ಕನೈಸ್ಡ್ ಫೈಬರ್.
2. ರಾಕಿಕೈಗಾರಿಕೆ.
3. ನೀರಿನ ಮೋಟರುಗಳು.
4. ಕಬ್ಬಿಣದ ಚೂರುಗಳ ಉಪಯೋಗ.
5. ಮಾರ್ಲ್.
6. ಮೈಸೂರಿನ ಆಯುಧಗಳ ತಯಾರಿ.
7. ಜೇನುಸಾಕುವುದು.
8. ಟೆಕ್ಸ್‌ಟೈಲ್ ಪ್ರಿಂಟಿಂಗು ತಯಾರಿ.
9. ಸ್ಲೇಟು ಮತ್ತು ಅದರ ಕಟ್ಟುಗಳು.
10. ಟ್ರಾನ್ಸ್‌ಫಾರ್ಮರುಗಳು.
11. ಮರವಜ್ರದ ತಯಾರಿ.
12. ಪಪಾಯಿನ್ ಮತ್ತು ಕ್ಯಾಸೀನಿನ ತಯಾರಿ.

(b) ವಾಣಿಜ್ಯ ವಿಷಯಗಳಿಗೆ ಸಂಬಂಧಪಟ್ಟುವು.—

1. ಕಪ್ಪೆಚಿಪ್ಪಿನ ಅಮದು.
2. ಎಣ್ಣೆಯ ಬೀಜಗಳು.
3. ಅಲಂಕಾರಶಿಲೆಗಳ ಮಾರಾಟ.
4. ಧಾರಣೀಯ ಸಾಮಾನುಗಳ ರಫ್ತು.
5. ಅಲ್ಯೂಮಿನಿಯಂನ ವ್ಯಾಪಾರಗಳು.
6. ಮ್ಯಾಗ್ನೆಸೈಟು ಅದಿರು.
7. ಮಿಥೈಲ್ ಆಲ್ಕೊಹಾಲ್.
8. ಮೂಳೆಯ ನರಬರಾಯಿ.
9. ಕಟ್ಟಿಂಗುಗಳ ವ್ಯಾಪಾರಿಗಳು.
10. ಅಮದು ರಫ್ತು.
11. ರೇಷ್ಮೆ ಮತ್ತು ಹತ್ತಿ ಬಟ್ಟೆಗಳ ವ್ಯಾಪಾರ.
12. ಅರಸಿನದ ವ್ಯಾಪಾರ.
13. ದೆಂಗಳೂರು ಸೀರೆಗಳ ವ್ಯಾಪಾರ.
14. ಪೈರು ಮತ್ತು ಸಿಲಿಕೇಟಿನ ನರಬರಾಯಿ.
15. ಜಮಖಾನೆಗಳ ಮತ್ತು ದೆತ್ತದ ಸಾಮಾನುಗಳು.

(c) ಇತರ ವಿಷಯಗಳು.—

1. ಮೈಸೂರಿನಲ್ಲಿ ತಯಾರಾಗುವ ಸಾಮಾನುಗಳ ಚಿತ್ರಗಳು.
2. ಬರಾತ್ಕಾರದ ಜೀವವಿಮಾ.
3. ತಾಮ್ರದಪೇರೆ ಶಾಸನಗಳು.
4. ನಾಣೂನಿನ ಅಮದು ರಫ್ತು.
5. ರಿಜಿಸ್ಟರಾದ ಕಾರ್ಖಾನೆಗಳು.
6. ಇರಾವಿಯ ಪ್ರಕಟನೆಗಳು.
7. ಅಪ್ರೂವ್ಡ್ ಕಂಟ್ರಾಕ್ಟರುಗಳು.
8. ಔಷಧಗಳ ಬಗ್ಗೆ ಹತೋಟಿಯ ಕಾನೂನು.

ಮೈಸೂರು ಸಂಸ್ಥಾನದ ರೈಲ್ವೇಗಳಿಂದ ಬಂದ ಆದಾಯ.

ಈ ತಿಂಗಳಿನಲ್ಲಿ ಸರ್ಕಾರದವರ ಆಡಳಿತಕ್ಕೊಳಪಟ್ಟಿರುವ ರೈಲ್ವೇಗಳಿಂದ ಸುಮಾರು 6,41,700 ರೂಪಾಯಿಗಳ ಆದಾಯವು ಬಂದಿತು. ಕಳೆದ ತಿಂಗಳು 7,32,700 ರೂಪಾಯಿಗಳು ಬಂದಿದ್ದುವು. 1939ನೇ ಇಸವಿ ಇದೇ ತಿಂಗಳಿನಲ್ಲಿ 5,73,017 ರೂಪಾಯಿಗಳ ಆದಾಯವು ಬಂದಿದ್ದಿತು.

ಈ ತಿಂಗಳಿನಲ್ಲಿ 22,75,446 ರೈಲ್ವೆ ಮಣಗಳಷ್ಟು ಸಾಮಾನನ್ನು ರೈಲುಗಳಲ್ಲಿ ಸಾಗಿಸಲಾಯಿತು. ಹಿಂದಿನ ತಿಂಗಳಿನಲ್ಲಿ 22,51,517 ಮಣಗಳಷ್ಟು ಸಾಮಾನನ್ನು ಸಾಗಿಸಲಾಗಿದ್ದಿತು. ಕಳೆದ ವರ್ಷ ಇದೇ ತಿಂಗಳಿನಲ್ಲಿ 24,37,328 ಮಣ ಸಾಮಾನನ್ನು ಸಾಗಿಸಲಾಗಿದ್ದಿತು.

1940ನೇ ಇಸವಿ ಜುಲೈ 1ನೇ ತಾರೀಖಿನವರೆಗೆ ರೈಲ್ವೆಯ ಆದಾಯದ 35,67,100 ರೂಪಾಯಿಗಳು ಆಗಿದ್ದಿತು. ಹಿಂದಿನ ವರ್ಷ ಇದೇ ಅವಧಿಯಲ್ಲಿ ಆದಾಯವು 30,36,122 ರೂಪಾಯಿಗಳು ಆಗಿದ್ದಿತು.

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಸರಬರಾಯಿ.

ಈ ಕೆಳಗೆ ಕಂಡುಬರುವ ತಖ್ತೆಯಿಂದ ಸಂಸ್ಥಾನದಲ್ಲಿ, ಈ ತಿಂಗಳಿನಲ್ಲಿ 25,642,500 ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಯಿತೆಂದೂ, 20,876,222 ಕಿಲೋವಾಟ್‌ಗಳಷ್ಟು ಶಕ್ತಿಯನ್ನು ಉಪಯೋಗಿಸಿಕೊಳ್ಳಲಾಯಿತೆಂದೂ ಕಂಡುಬರುತ್ತದೆ. ಕಳೆದ ತಿಂಗಳು 26,594,700 ಕಿಲೋವಾಟ್‌ಗಳಷ್ಟು ಶಕ್ತಿಯು ಉತ್ಪತ್ತಿಯಾಗಿ, 21,217,351 ಕಿಲೋವಾಟ್‌ಗಳಷ್ಟು ಶಕ್ತಿಯು ಉಪಯೋಗವಾಯಿತು. ಹಿಂದಿನ ಸಾಲು ಇದೇ ತಿಂಗಳಿನಲ್ಲಿ 22,228,725 ಕಿ. ವಾ. ಗಳಷ್ಟು ಶಕ್ತಿಯು ಉತ್ಪತ್ತಿಯಾಗಿ 17,804,093 ಕಿ. ವಾ. ಗಳಷ್ಟು ಶಕ್ತಿಯನ್ನು ಉಪಯೋಗಿಸಿಕೊಳ್ಳಲಾಯಿತು. ಉಪಯೋಗವಾದ ವಿದ್ಯುಚ್ಛಕ್ತಿಯಲ್ಲಿ, 7,05,323 ಕಿ. ವಾ. ಗಳು ಮನೆಯ ಕೆಲಸಗಳಿಗೂ, 19,617,047 ಕಿ. ವಾ. ಗಳು ಯಂತ್ರಗಳನ್ನು ನಡೆಯಿಸಲೂ ಮತ್ತು 5,53,852 ಕಿ. ವಾ. ಗಳು ರಸ್ತೆಯ ದೀಪಗಳಿಗಾಗಿಯೂ ಉಪಯೋಗವಾಗಿವೆ. ಈ ತಿಂಗಳಿನಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿದ್ದವರ ಸಂಖ್ಯೆಯು 47,813 ಆಗಿದ್ದಿತು. ಹಿಂದಿನ ತಿಂಗಳಿನಲ್ಲಿ 47,577 ಮತ್ತು 1939ನೇ ಇಸವಿ ಇದೇ ತಿಂಗಳಿನಲ್ಲಿ 44,546 ಆಗಿದ್ದಿತು. ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಸೌಕರ್ಯವನ್ನು ಪಡೆದಿರುವ ಗ್ರಾಮಗಳ ಮತ್ತು ಪಟ್ಟಣಗಳ ಸಂಖ್ಯೆಯು 209 ಆಗಿದ್ದಿತು. ಹಿಂದಿನ ತಿಂಗಳಿನಲ್ಲಿ 205 ಮತ್ತು ಆಗಸ್ಟು 1939ರಲ್ಲಿ 191 ಆಗಿದ್ದಿತು.

ವಿದ್ಯುಚ್ಛಕ್ತಿಯ ಉತ್ಪತ್ತಿ ಮತ್ತು ಅದರ ಉಪಯೋಗ.

		ನವೆಂಬರ್ 40	ಆಗಸ್ಟು 40	ನವೆಂಬರ್ 39
1.	ಉತ್ಪತ್ತಿಯಾದ ಶಕ್ತಿ. (a)	ಕಿ. ವಾ. 25,66,2500	ಕಿ. ವಾ. 26,594,700	ಕಿ. ವಾ. 22,228,725
2.	ಮಾರಾಟವಾದುದು.			
	(a) ಮನೆಗೆಲಸಗಳಿಗಾಗಿ.	705,323	762,319	570,561
	(b) ಯಂತ್ರಗಳನ್ನು ನಡೆಯಿಸುವುದಕ್ಕಾಗಿ.	19,617,047	19,952,129	16,704,292
	(c) ರಸ್ತೆಯ ದೀಪಗಳಿಗಾಗಿ.	553,852	562,903	529,240
		20,876,222	21,217,351	17,804,093
3.	ವಿದ್ಯುಚ್ಛಕ್ತಿಯನ್ನುಪಯೋಗಿಸುವವರ ಸಂಖ್ಯೆ.			
	(a) ದೀಪಗಳಿಗಾಗಿ.	42,387	42,160	39,542
	(b) ಯಂತ್ರಗಳನ್ನು ನಡೆಯಿಸುವುದಕ್ಕಾಗಿ.	2,770	2,754	2,569
	(c) ಅಡಿಗೆ ಮುಂತಾದುವುಗಳಿಗಾಗಿ.	2,044	2,034	1,879
	(d) ನೀರಾವರಿ ಕಾಮಗಾರಿಗಾಗಿ.	612	609	556
		47,813	47,577	44,546
4.	ರಸ್ತೆಯ ದೀಪಗಳ ಸಂಖ್ಯೆ.	18,904	18,837	17,244
5.	ವಿದ್ಯುಚ್ಛಕ್ತಿಯ ಸೌಕರ್ಯವಿರುವ ಗ್ರಾಮಗಳ ಮತ್ತು ಪಟ್ಟಣಗಳ ಸಂಖ್ಯೆ.	209	205	191

ಈ ತಿಂಗಳಿನಲ್ಲಿ 3,955 ಸಾವಿರ ಗಜ ಹತ್ತಿಯ ಬಟ್ಟೆಗಳು (3,884, ಸಾವಿರ ಗಜಗಳು) ತಯಾರಾದುವು. ಹತ್ತಿಯ ಬಟ್ಟೆಗಳಿಗೆ ಗಿರಾಕಿಯು ಚನ್ನಾಗಿದ್ದಿತು. ಮಿಲ್ಲುಗಳಲ್ಲಿ 2,356 ಸಾವಿರ ಪೌಂಡು (2,171, ಸಾವಿರ ಪೌಂಡು) ದಾರವನ್ನು ತಯಾರಿಸಲಾಯಿತು.

ಈ ತಿಂಗಳಿನಲ್ಲಿ 3,487 ಟನ್‌ಗಳಷ್ಟು (2,801) ಸಕ್ಕರೆಯನ್ನು ತಯಾರಿಸಲಾಯಿತು.

777 ಗ್ರೋಸ್ (555 ಗ್ರೋಸ್) ಬೆಂಕಿಕಡ್ಡಿ ಪಟ್ಟಣಗಳನ್ನು ತಯಾರಿಸಲಾಯಿತು.

ಟ್ಯಾನರಿಗಳಲ್ಲಿ 187,600 (167,700) ಪೌಂಡುಗಳಷ್ಟು ಚರ್ಮಗಳನ್ನು ಹದಮಾಡಲಾಯಿತು. 42,730 (27,877) ಪೌಂಡು ಕ್ರೋಂ ಟ್ಯಾನು ಮಾಡಿದ ಚರ್ಮಗಳನ್ನು ತಯಾರಿಸಲಾಯಿತು.

ಚಿನ್ನದ ಗಣಿಗಳಲ್ಲಿ 29,60,406 (30,88,587) ರೂಪಾಯಿಗಳು ಬೆಲೆ ಬಾಳುವ ಚಿನ್ನವನ್ನು ತೆಗೆಯಲಾಯಿತು.

ಭದ್ರಾವತಿಯಲ್ಲಿ 2,417 ಟನ್ (2,275) ನಾದು ಕಬ್ಬಿಣವನ್ನು ತಯಾರಿಸಲಾಯಿತು. 2,660 (5,566) ಟನ್‌ಗಳಷ್ಟು ಉಕ್ಕಿನ ಗಟ್ಟಿಗಳನ್ನು ತಯಾರಿಸಲಾಯಿತು.

ಚರ್ಕಾ ರೇಷ್ಮೆಯ ಸರಕೂ ಗಿರಾಕಿಯೂ ಸುಮಾರಾಗಿದ್ದಿತು. ಧಾರಣಿಯು ಒಂದೇ ಸಮವಾಗಿದ್ದಿತು.

ಸರ್ಕಾರದ ರೈಲ್ವೆಗಳಿಂದ 6,41,700 (7,32,700) ರೂಪಾಯಿಗಳ ಆದಾಯವು ಬಂದಿತು.

25,642,500 (26,594,700) ಕಿಲೋವಾಟ್ ಗಂಟೆಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲಾಯಿತು. 20,876,222 (21,217,351) ಕಿಲೋವಾಟ್ ಗಂಟೆಗಳಷ್ಟು ಶಕ್ತಿಯು ವಿನಿಯೋಗವಾಯಿತು. ಸಂಸ್ಥಾನದಲ್ಲಿ ವಿದ್ಯುದ್ದೀಪಗಳ ಸೌಕರ್ಯವನ್ನು ಪಡೆದಿರುವ ನಗರಗಳ ಮತ್ತು ಗ್ರಾಮಗಳ ಸಂಖ್ಯೆ 209 (205). (ಬ್ರಾಕೆಟ್ಟಿನಲ್ಲಿರುವ ಸಂಖ್ಯೆಗಳು ಹಿಂದಿನ ತಿಂಗಳಿನವು.)

ನವೆಂಬರ್ ತಿಂಗಳಿನ ವ್ಯಾಪಾರ.

1940ನೆಯ ಇಸವಿ ಮೇಲ್ಕಂಡ ತಿಂಗಳಿನಲ್ಲಿ ವ್ಯಾಪಾರ ಸ್ಥಿತಿಯು ಸ್ವಲ್ಪ ಉತ್ತಮವಾಗಿದ್ದಿತು. ಹತ್ತಿ ನೂಲು, ಕಬ್ಬಿಣ, ಸಕ್ಕರೆ, ದೆಂಕಿಕಡ್ಡಿಗಳ ತಯಾರಿ ಸ್ವಲ್ಪ ಹೆಚ್ಚಾಗಿದ್ದಿತು. ಚಿನ್ನದ ತಯಾರಿಯು ಸ್ವಲ್ಪ ಕಡಮೆಯಾಗಿದ್ದಿತು. ಧಾರಣೆ ವಾಸಿಗಳ ಜನರಲ್ ಮತ್ತು ಇಂಡೆಕ್ಸ್ ನಂಬರಿನಲ್ಲಿ ಇವು ಒಟ್ಟು 117, ಹಿಂದಿನ ತಿಂಗಳಿನಲ್ಲಿ 117, ಹೋದವರ್ಷ ಇದೇ ತಿಂಗಳಿನಲ್ಲಿ 117.

ಈ ಕೆಳಗಿನ ಅಂಕಿಗಳಿಂದ ಈ ವಿಷಯವು ಇನ್ನೂ ವಿವರವಾಗಿ ತಿಳಿಯುವುದು :—

	ನೊ. 1940	ಲ. 1940	ನೊ. 1939
1. ಆಹಾರ ಧಾನ್ಯಗಳು ...	112	113	126
2. ಎಣ್ಣೆ ಮತ್ತು ಎಣ್ಣೆಯ ಬೀಜಗಳು.	101	106	104
3. ಇತರ ಆಹಾರ ಪದಾರ್ಥಗಳು ...	105	107	111
4. ಬಟ್ಟೆಬರೆಗಳು ...	117	114	106
5. ಇತರ ವಸ್ತುಗಳು ...	140	139	139
6. ಜನರರ್ ಇಂಡೆಕ್ಸ್ ನಂಬರುಗಳು.	117	117	117

ಕಾರ್ಖಾನೆಗಳ ಮಾಲೀಕರಿಗೂ ಕೆಲಸಗಾರರಿಗೂ ಮಧುರ ಬಾಂಧವ್ಯವಿದ್ದಿತು.

ಹತ್ತಿಯ ಬಟ್ಟೆಗಳು.

ಈ ತಿಂಗಳಿನಲ್ಲಿ ನಮ್ಮ ಸಂಸ್ಥಾನದಲ್ಲಿ ನೇದ ಬಟ್ಟೆಗಳು ಎಷ್ಟು ತಯಾರಾದುವು; ಹಿಂದಿನ ತಿಂಗಳಿನಲ್ಲಿಯೂ, ಮತ್ತು ಹಿಂದಿನ ಸಾಲಿನ ಇದೇ ತಿಂಗಳಿನಲ್ಲಿಯೂ, ಎಷ್ಟು ತಯಾರಾಯಿತು ಎಂಬುದನ್ನು ಹೋಲಿಸಿ ತೋರಿಸುವ ಪಟ್ಟಿ.—

	1928–29ಕ್ಕೆ ಕೊನೆಯಾದ ಮೂರು ವರ್ಷಗಳಲ್ಲಿ ಆಗಸ್ಟ್ ತಿಂಗಳಿನ ಸರಾಸರಿ	ನವೆಂಬರ್ 1940	ಅಕ್ಟೋಬರ್ 1940	ನವೆಂಬರ್ 1939	ಹೆಚ್ಚು ಕಡಮೆಯಾಗಿರುವ ವ್ಯತ್ಯಾಸ ಶೇ. 1926–27 ರಿಂದ 1928–29ರ ವರೆಗಿನ ಮೂವರ ಸರಾಸರಿ	ಅಕ್ಟೋಬರ್ 1940	ನವೆಂಬರ್ 1940
ಮಿಲ್ಲುಗಳಲ್ಲಿ ತಯಾರಾದ ಬಟ್ಟೆ ಒಟ್ಟು ಪೌಂದು (000)	633	1,464	1,354	1,103	+135	+8	+33
ಗಜ (000)	1,900	3,955	3,884	3,566	+108	+2	+11

ಕಳೆದ 1934–35 ರಿಂದ ನಮ್ಮ ಸಂಸ್ಥಾನದಲ್ಲಿ ಮಾಹೆಯಾನಾ ತಯಾರಾದ ಹತ್ತಿಯ ಬಟ್ಟೆಗಳ ವಿವರ.—

ಗಜಗಳಲ್ಲಿ (000)

	35–36	36–37	37–38	38–39	39–40	40–41
ಏಪ್ರಿಲ್	2,329	2,537	2,642	2,842	2,951	3,653
ಮೇ	2,645	2,762	2,617	3,240	3,385	4,107
ಜೂನ್	2,575	2,689	2,846	3,229	3,254	4,113
ಜುಲೈ	2,648	2,746	3,086	3,406	3,168	3,914
ಆಗಸ್ಟ್	2,714	2,653	3,005	3,171	3,171	3,937
ಸೆಪ್ಟೆಂ.	2,303	2,655	2,921	3,297	3,236	3,468
ಅಕ್ಟೋಬರ್	2,420	2,657	2,887	3,111	3,240	3,884
ನವೆಂಬರ್	2,475	2,660	2,953	3,412	3,566	3,955
ಡಿಸೆಂಬರ್	2,429	2,753	3,137	3,502	3,824	...
ಜನವರಿ	2,380	3,187	2,858	3,216	3,830	...
ಫೆಬ್ರುವರಿ	2,662	2,560	2,897	2,904	3,454	...
ಮಾರ್ಚ್	2,661	2,770	3,151	3,163	3,883	...
ಒಟ್ಟು...	30,241	32,629	35,000	38,493	...	...

ಈ ತಿಂಗಳಿನಲ್ಲಿ ಒಟ್ಟು 3,955 ಸಾವಿರ ಗಜ ಹತ್ತಿಯ ಬಟ್ಟೆ ತಯಾರಾಯಿತು. ಹಿಂದಿನ ತಿಂಗಳಿನಲ್ಲಿ 3,463 ಸಾವಿರ, ಕಳೆದ ಸಾಲಿನ ಇದೇ ತಿಂಗಳಿನಲ್ಲಿ 3,566 ಸಾವಿರ ಗಜಗಳು ತಯಾರಾದುವು. ಎಂದರೆ ಹಿಂದಿನ ತಿಂಗಳಿಗಿಂತಲೂ 71 ಸಾವಿರ ಗಜ ಹೆಚ್ಚು ಎಂದರೆ, ಶೇಕಡ 2ರಷ್ಟು ಹೆಚ್ಚು ಮತ್ತು ಕಳೆದ ಸಾಲು ಇದೇ ತಿಂಗಳಿಗಿಂತ 389 ಸಾವಿರಗಳು ಅಥವಾ ಸೇಕಡಾ 11ರಷ್ಟು ಹೆಚ್ಚಾಗಿ ತಯಾರಾಯಿತು.

ಈ ತಿಂಗಳಿನಲ್ಲಿ ಹತ್ತಿಯ ಬಟ್ಟೆಗಳಿಗೆ ಗಿರಾಕಿಯು ಸಾಧಾರಣವಾಗಿದ್ದಿತು. ಕೆಲವು ತರದ ಬಟ್ಟೆಗಳ ಧಾರಣೆಗಳನ್ನು ಇಲ್ಲಿ ಕೊಡಲಾಗಿದೆ :—

ಮಿಲ್ಲುಗಳು	ಧಾರಣೆಗಳು ರೂ. ರೂ.
ಧೋತ್ರಗಳು—ಮೈಸೂರು ಮಿರ್ಸ್	8 ಚೊಳದ ಜೊತೆಗೆ 1–10–3 ರಿಂದ 2–3–0
ಅಂಗಿಯ ಬಟ್ಟೆಗಳು—ಡಿಟೋ	24 ಗಜಗಳ ಥಾನಿಗೆ 5–12–0 ರಿಂದ 12–0–0
ಡಿಟೋ ಬಿ. ಡಬ್ಲ್ಯು. ಅಂಡ್ ಸಿ. ಮಿರ್ಸ್	8–0–0 ರಿಂದ 16–12–0
ಷರ್ಟಿಂಗ್ ಬಟ್ಟೆಗಳು—ಮೈಸೂರು ಮಿರ್ಸ್.	4–10–0 ರಿಂದ 7–0–0
ಡಿಟೋ ಗೋರ್ಡ್ ಸ್ಯಾಂಡರ್ಡ್ ಬಿ. ಡಬ್ಲ್ಯು. ಅಂಡ್ ಸಿ. ಮಿರ್ಸ್.	8–0–0 ರಿಂದ 12–8–0
ರಾಂಗ್ ಕ್ಲಾತ್—ಮೈಸೂರು ಮಿರ್ಸ್	11–2–0, 40 ಗಜಗಳ ಥಾನಿಗೆ
ಡಿಟೋ ಬಿ. ಡಬ್ಲ್ಯು. ಅಂಡ್ ಸಿ. ಮಿರ್ಸ್	12–8–0ಯಿಂದ 13–0–0
ತಾತಾಮಿರ್ಸ್ ಬಟ್ಟೆ ...	4–2–0
ತಾತಾ ಮಿರ್—	
ಬೇಬಿ ರಾಂಗ್ ಕ್ಲಾತ್	ರೂ. 12–10–0 ರಿಂದ ಥಾನಿಗೆ.

ಸಂಸ್ಥಾನದಲ್ಲಿರುವ ಹತ್ತಿಯ ಮಿಲ್ಲುಗಳೆಲ್ಲ ಯಥಾಶಕ್ತಿ ಸಂಪೂರ್ಣವಾಗಿ ಕೆಲಸಮಾಡಿದುವು.

* ಧಾರಣೆವಾಸಿಗಳ ಏರಿಳಿತಗಳನ್ನು 1914ನೆಯ ಇಸವಿಯ ಧಾರಣೆವಾಸಿಗಳ ಆಧಾರದ ಮೇರೆ ಲೆಕ್ಕಾಚಾರ ಮಾಡುತ್ತಾರೆ. ನೂರು ಇದ್ದರೆ ಧಾರಣೆಯು ಸರಿಯಾಗಿದೆಯೆಂದೂ, ನೂರಕ್ಕಿಂತ ಹೆಚ್ಚಾಗಿದ್ದರೆ ಧಾರಣೆಯು ಏರುತ್ತಿದೆಯೆಂದೂ, ಕಡಮೆಯಾಗಿದ್ದರೆ ಇಳಿಯುತ್ತಿದೆಯೆಂದೂ ಅರ್ಥ.

ನೂಲು.

ನವೆಂಬರ್ (1940), ಅಕ್ಟೋಬರ್ (1940), ನವೆಂಬರ್ (1939)ರಲ್ಲಿ ಸಂಸ್ಥಾನದಲ್ಲಿರುವ ಮಿಲ್ಲುಗಳು ನೂತ ನೂಲಿನ ಪ್ರಮಾಣವು ಈ ಕೆಳಗಿನಂತೆ ಇವೆ :—

	ನವೆಂಬರ್ 1940	ಅಕ್ಟೋಬರ್ 1939	ನವೆಂಬರ್ 1939	ಹೆಚ್ಚು ಕಡಮೆ ಶೇಕಡ	
				ಅಕ್ಟೋಬರ್ 1940	ನವೆಂಬರ್ 1940
ದಾರ ಪೌಂ.(000)	2,356	2,171	1,948	+9	+21

ಈ ತಿಂಗಳಿನಲ್ಲಿ ತಯಾರಾದ ನೂಲಿನ ಒಟ್ಟು ಪ್ರಮಾಣವು 2,356 ಸಾವಿರ ಪೌಂಡು. ಹಿಂದಿನ ತಿಂಗಳಿನಲ್ಲಿ 2171, ಸಾವಿರ ಪೌಂಡು. ಕಳೆದ ವರ್ಷ ಇದೇ ತಿಂಗಳಿನಲ್ಲಿ 1,948 ಸಾವಿರ ಪೌಂಡು, ಎಂದರೆ ತಯಾರಿಯು ಕಳೆದ ತಿಂಗಳಿಗಿಂತ 185 ಸಾವಿರ ಪೌಂಡಿನಷ್ಟು, ಎಂದರೆ ಶೇಕಡ 9 ರಷ್ಟು ಹೆಚ್ಚಾಯಿತು. ಸಂಸ್ಥಾನದಲ್ಲಿ ಈ ತಿಂಗಳಿನಲ್ಲಿ 399,705 ಕದರುಗಳು ಕೆಲಸಮಾಡಿದುವು. ಹಿಂದಿನ ತಿಂಗಳಿನಲ್ಲಿ 327,802 ನವೆಂಬರ್ (1939)ರಲ್ಲಿ 364,150 ಇದ್ದುವು.

20ನೇ ಮತ್ತು 40ನೇ ನಂಬರ್ ನೂಲಿಗೆ 10 ಪೌಂಡು ಮೂಟೆಗೆ ಕ್ರಮವಾಗಿ, ರೂ. 4–14–0 ಮತ್ತು ರೂ. 6–8–0 ಮತ್ತು 6–8 0 ಇಂದ 7–8–0 ದರೆ ಇತ್ತು.

ಬೆಳೆಗಳ ನಿರೀಕ್ಷೆ.

1938–39 ಮತ್ತು 1939–40ನೇ ಸಾಲಿನಲ್ಲಿ ಸಂಸ್ಥಾನದಲ್ಲಿ ಹತ್ತಿ ಮತ್ತು ಇತರ ರಾಧಾದಾಯಕವಾದ ಬೆಳೆಗಳು ಹೇಗಾಗಬಹುದೆಂಬ ನಿರೀಕ್ಷೆಯನ್ನು ತೋರಿಸುವ ಪಟ್ಟಿ :—

ಪದಾರ್ಥದ ಹೆಸರು	ಪ್ರಥಮ ನಿರೀಕ್ಷೆ		ದ್ವಿತೀಯ ನಿರೀಕ್ಷೆ		ತೃತೀಯ ನಿರೀಕ್ಷೆ	
	1940–41	1939–40	1938–39	1939–40	1938–39	1939–40
1. ಹತ್ತಿ ...	...	76,450	83,296	...	...	...
2. ಗೋಧಿ ...	...	63,907	...			
3. ನೆಲಗಡಲೆ ...	94,635	78,459	...	...	...	...
4. ಹರಳುಬೀಜ ...	...	...	...	...	...	...
5. ಬತ್ತ ...	...	744550	...	...	...	...
6. ರಾಗಿ ...	...	...	...	...	...	...
7. ಕಬ್ಬು ...	...	...	...	...	...	...

ಪದಾರ್ಥದ ಹೆಸರು	ನಾಲ್ಕನೆ ನಿರೀಕ್ಷೆ		ಅಂದಾಜು	
	1940–41	1939–40	1940–41	1939–40
1. ಹತ್ತಿ ...	...	83,854	...	11,975 ಬೇಲುಗಳು
2. ಗೋಧಿ ...	...	2,549	...	604 ಟನ್‌ಗಳು
3. ನೆಲಗಡಲೆ ...	...	226,181	...	43,379 ,,
4. ಹರಳುಬೀಜ ...	...	...	...	218,886 ,,
5. ಬತ್ತ ...	...	...	...	...
6. ರಾಗಿ ...	...	...	...	...
7. ಕಬ್ಬು ...	...	...	...	...

ಕಚ್ಚಾ ಹತ್ತಿ.

ಪ್ರೆಸ್ಸಾದ ಹತ್ತಿ.—ಸಂಸ್ಥಾನದಲ್ಲಿರುವ ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಫ್ಯಾಕ್ಟರಿಗಳು ಈ ತಿಂಗಳಿನಲ್ಲಿ 522 ಬೇಲುಗಳಷ್ಟು ಹತ್ತಿಯನ್ನು ಪ್ರೆಸ್ ಮಾಡಿದ್ದುವು. ಹಿಂದಿನ ತಿಂಗಳು 1,081 ಬೇಲುಗಳನ್ನು ಪ್ರೆಸ್ಸು ಮಾಡಿದ್ದೆವು.

ಮಿಲ್ಲಿನಲ್ಲಿ ಉಪಯೋಗ.—ಸಂಸ್ಥಾನದಲ್ಲಿರುವ ಮಿಲ್ಲುಗಳು ಈ ಕೆಳಗೆ ಕಂಡಂತೆ ದೇಶೀಯ ಹತ್ತಿಯನ್ನು ಉಪಯೋಗಿಸಿವೆ :—

ಬೇಲು ಒಂದಕ್ಕೆ 400 ಪೌಂಡು.

	ಬೇಲುಗಳು
ನವೆಂಬರ್ (1940)	6,225
ಅಕ್ಟೋಬರ್ (1940)	5,894
ನವೆಂಬರ್ (1939)	5,272
ಸೆಪ್ಟೆಂಬರ್ (1940) ಮೊದಲನೆಯ ತಾರೀಖಿನಿಂದ ಇದುವರೆಗೆ ಉಪಯೋಗವಾದ ಹತ್ತಿ	17,920
ಕಳೆದ ವರ್ಷ ಇದೇ ಕಾಲದಲ್ಲಿ	16,024

ಕಚ್ಚಾ ಹತ್ತಿಯ ಬೆಲೆಯು 500 ಪೌಂಡು ತೂಕಕ್ಕೆ ಈ ತಿಂಗಳಿನಲ್ಲಿ ರೂ. 121-0-0 ರಂತೆ, ಹಿಂದಿನ ತಿಂಗಳಿನಲ್ಲಿ ದರ ರೂ. 114-8-0, ನವೆಂಬರ್ (1939) ರೂ. 109-8-0 ರಂತೆ ಇತ್ತು.

ಬೀಡು ಕಬ್ಬಿಣ.

ಮೈನೂರು ಪೌಂಡ್ರಿಯ ಬೀಡು ಕಬ್ಬಿಣಕ್ಕೆ ಈ ಕೆಳಗೆ ಕಂಡಂತೆ ಬೆಲೆ ಇತ್ತು :—

	ವ್ಯಾಗನ್‌ಗೆ ಟನ್ ಒಂದಕ್ಕೆ ಎಫ್. ಓ. ಆರ್., ಮದ್ರಾಸ್.	
1	ಚಾರ್‌ಕೋಲ್ ಬೀಡು ಕಬ್ಬಿಣ (ಪೈ ಸೆಲೆಕ್ಟ್ ಗ್ರೇಡ್)	ರೂ. 97
2	,, (ನ್ಯಾಡ್ ಗ್ರೇಡ್)	,, 95
3	,, ನಂ. 1, 2 ಗ್ರೇಡ್‌ಗಳು	,, 93
4	,, 3, 4, 5 ಗ್ರೇಡ್‌ಗಳು	,, 91

ಈ ತಿಂಗಳಿನಲ್ಲಿ ತಯಾರಾದ ಬೀಡು ಕಬ್ಬಿಣವು 2,417 ಟನ್‌ಗಳು. ಹಿಂದಿನ ತಿಂಗಳಿನಲ್ಲಿ 2,275 ಟನ್‌ಗಳು.

ಈ ತಿಂಗಳಿನಲ್ಲಿ 1 083 ಹಿಂದಿನ ತಿಂಗಳಿನಲ್ಲಿ 715 ಟನ್‌ಗಳಷ್ಟು ಕಬ್ಬಿಣದ ಎರಕವು ನಡೆಯಿತು.

ಈ ತಿಂಗಳಿನಲ್ಲಿ ಎಷ್ಟೆಷ್ಟು ಉಕ್ಕಿನ ಗಟ್ಟಿಗಳಾದುವು ಎಂಬುದನ್ನು ಕೊಟ್ಟಿದೆ :—

	ನವೆಂಬರ್ 1940 ಟನ್‌ಗಳು
ಉಕ್ಕಿನ ಗಟ್ಟಿಗಳು	3,509
ಶೀರ್ ಉಕ್ಕಿನ ಪೆಕ್ಟ್‌ಗಳು	...
ಬಿಲ್ಲೆಟ್‌ಗಳು	2,057

ಸಕ್ಕರೆ.

ಸಂಸ್ಥಾನದಲ್ಲಿ ಈ ತಿಂಗಳಿನಲ್ಲಿ 3487 ಟನ್‌ಗಳಷ್ಟು ಸಕ್ಕರೆಯು ತಯಾರಾಯಿತು. ಹಿಂದಿನ ತಿಂಗಳು 2810 ಟನ್‌ಗಳು ತಯಾರಾಗಿದ್ದಿತು. ಮಂಡ್ಯದ ಸಕ್ಕರೆಗೆ ಗಿರಾಕಿಯು ಚನ್ನಾಗಿದ್ದಿತು. ಬೆಂಗಳೂರಿನ ಸಂತೆಯಲ್ಲಿ 2 ಹಂಡ್ರೆಡ್ ವೈಟಿನ ಮೂಟೆಯೊಂದಕ್ಕೆ ರೂ. 26-8-0 ಇಂದ ರೂ. 27-0-0 ದರೆಯಿತ್ತು.

ಬೆಂಕಿಕಡ್ಡಿ.

ಸಂಸ್ಥಾನದಲ್ಲಿ ಈ ತಿಂಗಳಿನಲ್ಲಿ 777 ಗ್ರೋಸ್, ಹಿಂದಿನ ತಿಂಗಳಿನಲ್ಲಿ 555 ಗ್ರೋಸ್‌ಗಳು ಬೆಂಕಿಕಡ್ಡಿ ಪೆಟ್ಟಿಗೆಗಳು ಆಗಿದ್ದುವು.

ಚರ್ಮ.

ಸಂಸ್ಥಾನದ ದೊಡ್ಡ ದೊಡ್ಡ ಟ್ಯಾನರಿಗಳಲ್ಲಿ ಈ ತಿಂಗಳಿನಲ್ಲಿ ತೊಗಟೆಹಾಕಿ ಹದಮಾಡಿದ ಚಕ್ಕಳಗಳೂ ಚರ್ಮಗಳೂ ಒಟ್ಟು 1,87,000 ಹಿಂದಿನ ತಿಂಗಳಿನಲ್ಲಿ 167,000 ಪೌಂಡುಗಳು ತಯಾರಾದುವು. 42,730 ಪೌಂಡು ಹದಮಾಡಿದ ಚಕ್ಕಳಗಳು ಆಮದಾದುವು. ಹಿಂದಿನ ತಿಂಗಳಿನಲ್ಲಿ 27,877 ಪೌಕೆ ಆಮದಾಗಿದ್ದಿತು.

ಧಾರಣೆವಾಸಿಗಳು ಬೆಂಗಳೂರಿನಲ್ಲಿ ಈ ತಿಂಗಳು ಹೀಗೆ ಇದ್ದುವು:—

ಎಮ್ಮೆ ಚಕ್ಕಳ.—

ಪೌಂಡು ಒಂದಕ್ಕೆ

	ರೂ. ಅ. ಪೈ	ರೂ. ಅ. ಪೈ
(a) ದಪ್ಪಜಾತಿ	.. 0—9—6	ರಿಂದ 0—10—0
(b) ಸಾಧಾರಣ ಜಾತಿ	... 0—10—6	
(c) ಹಗುರ ಜಾತಿ	... 0—10—6	
ಕರುಗಳ ಚರ್ಮ	... 0—11—6	ರಿಂದ 0—12—0

ದನದ ಚಕ್ಕಳ.—

	ರೂ. ಅ. ಪೈ.	ರೂ. ಅ. ಪೈ
(a) ದಪ್ಪಜಾತಿ	... 0—10—0	ರಿಂದ 0—10—6
(b) ಸಾಧಾರಣ ಜಾತಿ	... 0—12—6	ರಿಂದ 0—13—0
(c) ಹಗುರ ಜಾತಿ	... 0—13—9	ರಿಂದ 0—14—0
ಇನ್ನೂ ಹಗುರ ಜಾತಿ	... 0—14—0	
ಕರುಗಳ ಚರ್ಮ	... 1—5—0	ರಿಂದ 1—6—0
ಆಡಿನ ಚರ್ಮ	... 1—8—0	ರಿಂದ 1—12—0
ಕುರಿ ಚರ್ಮ	... 1—6—0	ರಿಂದ 1—8—0

ಚಿನ್ನ.

